# ನಾದನೂಪುರ ವಂಡಾರು
# Nadanoopura Vandaru


ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978



Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/


ಯಕ್ಷ ಪ್ರಣತಿ 2023





**ಪರಿವಿಡಿ**

**ಬೋರ್ಡ್ ರೂಮ್**

**ಸಂಪಾದಕೀಯ**

**ಯಕ್ಷಗಾನ ಸಂಘಟನೆಯಲ್ಲಿ ಸ್ತ್ರೀ ಶಕ್ತಿ**

**ಯಕ್ಷಗಾನದ ಚಿಕ್ಕ ರೂಪ – ಚಿಕ್ಕಮೇಳ**

**ನಡುತಿಟ್ಟಿನ ಗತ್ತು ಗೈರತ್ತಿನ ಕಲಾವಿದ – ಬೆದ್ರಾಡಿ**

**ಮೇಳದರ್ಪಣ– ಕದ್ರಿ ಮೇಳದ ಗತ ವೈಭವ**

**ಧೀರ ಕಲೆಯೊಳಗೆ ಕೀರವಾಣಿಯರು– ಶ್ರೀಮತಿ ಗೀತಾ ಹೆಗಡೆ ಸಾಲ್ಕಣಿ– 16**

**ಕಂದಾವರ ಪ್ರಸಂಗ ಮಾಲಿಕೆ**


## ತಿಂಗಳ ಹೈಲೈಟ್ಸ್

**ಕಲೆ, ಕಲಾವಿದರ ಆಶಾಕಿರಣವಾಗಲಿದೆ 'ಯಕ್ಷ ನಕ್ಷತ್ರ ಟ್ರಸ್ಟ್ ಕಿರಾಡಿ'**

**ಯಕ್ಷಗಾನ ಸಂಘಟನೆಯಲ್ಲಿ ಸ್ತ್ರೀ ಶಕ್ತಿ**

**ಯಕ್ಷಗಾನದ ಚಿಕ್ಕ ರೂಪ – ಚಿಕ್ಕಮೇಳದ ಆಳ – ಅಗಲ**

**ಕದ್ರಿ ಮೇಳದ ಗತ ವೈಭವ**

**ನಡುತಿಟ್ಟಿನ ಗತ್ತು ಗೈರತ್ತಿನ ಕಲಾವಿದ – ಬೆದ್ರಾಡಿ**

## ಬೋರ್ಡ್ ರೂಂ



**ಗೋವಿಂದ ವಂಡಾರು**

**ಆತ್ಮೀಯರೆ,**

ಯಕ್ಷಗಾನ ಕಲೆಗೆ ಸಂಬಂದಿಸಿದಂತೆ ಅದೆಷ್ಟೋ ಸಂಘ ಸಂಘಟನೆಗಳು ಹಿಂದಿನಿಂದಲೂ ಖಾಸಗಿಯಾಗಿ, ಸಾಮೂಹಿಕವಾಗಿ ರಚನೆಗೊಂಡಿವೆ. ಕಲಾವಿದರಿಗೆ ಪ್ರಾಥಮಿಕ ಸಂಘಟನೆಯೆಂದರೆ ಮೇಳಗಳೇ ಎನ್ನಬಹುದು. ಆದರೆ ಅವು ದೇವಸ್ಥಾನಗಳ ಹಿನ್ನಲೆ ಹಾಗೂ ವ್ಯಾವಹಾರಿಕ ಉದ್ದೇಶಗಳಿಗಾಗಿ ಇರುವಂಥದ್ದು. ಕಲಾವಿದರಿಗೆ ಉದ್ಯೋಗ ನೀಡುವ ವ್ಯವಸ್ಥೆ ಅದು. ಆದರೆ ಕಲಾಸೇವೆಗಾಗಿಯೇ ರಚಿಸಿಕೊಂಡ ಅದೆಷ್ಟೋ ಸಂಸ್ಥೆಗಳು ವಿವಿಧ ಸಂಸ್ಥೆ, ಬ್ಯಾಂಕು, ಖಾಸಗಿ ದಾನಿಗಳಿಂದ ಹಣ ಸಂಗ್ರಹಿಸಿ ದೊಡ್ಡ ಮಟ್ಟದ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಕೆಲವು ಸಂಸ್ಥೆಗಳನ್ನು ನಡೆಸಲಾಗದೇ ಕೆಲವೇ ವರ್ಷಗಳಲ್ಲಿ ನಿಲ್ಲಿಸಿದ ಉದಾಹರಣೆಗಳೂ ಇದೆ. ಎಷ್ಟೋ ಆಸಕ್ತರು ಉತ್ಸಾಹಿಗಳು ಕೈಯ್ಯಿಂದ ಹಣ ಹಾಕಿ ಸಂಸ್ಥೆಯ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಸುದೀರ್ಘ ಕಾಲದಿಂದ ಕಲಾವಿದರ ಸಮುದಾಯಕ್ಕೆ ಬೆನ್ನೆಲುಬಾಗಿ ನಿಂತಿರುವ ಕಲಾರಂಗದಂತಹ ಸಂಘಟನೆಯನ್ನೂ ನೋಡಬಹುದು. ಕೆಲವೇ ಕೆಲವು ಸಂಘ ಟ್ರಸ್ಟ್ ಗಳು ಸಾಮಾಜಿಕ ಉದ್ದೇಶ, ಕಲೆಯನ್ನು ಬೆಳೆಸುವ ಉದ್ದೇಶದಿಂದ ನಡೆಸಲ್ಪಡುತ್ತಿವೆ. ಕಲಾವಿದರೇ ನಡೆಸುವಂತಹ ಸಂಸ್ಥೆಗಳ ಬಾಹುಳ್ಯ ಹೆಚ್ಚಿರುವುದನ್ನೂ ಗಮನಿಸಬಹುದು. ಹೆಚ್ಚಿನ ಸಂಘ ಸಂಸ್ಥೆಗಳ ಉದ್ದೇಶ ಲಾಭ ಮಾಡಬೇಕು ಎಂಬುದಾಗಿದೆ. ಕಲಾವಿದರಲ್ಲದೆ ಕಲೆಯ ಅಭಿಮಾನಿಗಳು ಕಲೆಯ ಮೇಲಿನ ಪ್ರೇಮದಿಂದಲೂ ನಡೆಸುವಂತಹಾ ಸಂಸ್ಥೆಗಳಿವೆ. ಹೆಚ್ಚಿನ ತಂಡ ಸಂಘಗಳು ಕಾನೂನಿನ್ವಯ ನೋಂದಾಯಿಸಲ್ಪಟ್ಟವು ಅಲ್ಲ. ನೋಂದಾವಣೆಯಾಗದೆ ಇರುವ ಹಲವಾರು ಸಂಸ್ಥೆಗಳಿವೆ. ಅವರಲ್ಲೂ ಕೆಲವರು ಉತ್ತಮ ಕೆಲಸ ಮಾಡಿರುವ ಉದಾಹರಣೆಗಳಿದೆ. ಒಳ್ಳೆಯ ಉದ್ದೇಶಕ್ಕಾಗಿ ಸ್ಥಾಪನೆಯಾದ ಯಕ್ಷಗಾನದ ಟ್ರಸ್ಟ್ ಗಳು ನೋಂದಣಿಯಾಗಲೇಬೇಕೆಂಬ ನಿಯಮವೂ ಇಲ್ಲ. ಆದರೆ ಸರ್ಕಾರದೊಂದಿಗೆ ಸಹಭಾಗಿತ್ವ ಪಡೆದುಕೊಳ್ಳುವ ಸಂದರ್ಭದಲ್ಲಾಗಲೀ, ಕೆಲವೊಂದು ಪ್ರತಿಷ್ಠಿತ ಸಂಸ್ಥೆಗಳ ನೆರವು ಬೇಕಾದಾಗ ಕೆಲವೊಂದು ಸರಕಾರಿ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಟ್ರಸ್ಟ್ ನ ನೋಂದಾವಣೆ ಮಾಡಿಸಿಕೊಂಡಿರುವುದು ಅತೀ ಮುಖ್ಯವಾಗುತ್ತದೆ. ಸಮಾಜದ ನಂಬುಗೆ ಉಳಿಸಿಕೊಳ್ಳಲು ಸಂಘ ಸಂಸ್ಥೆಗಳ ಉದ್ದೇಶ, ಚಟುವಟಿಕೆಗಳು ಪಾರದರ್ಶಕವಾಗಿರಬೇಕಾಗುತ್ತದೆ. ಆದ್ದರಿಂದಲೇ ಸಂಘ ಸಂಸ್ಥೆ ಎಂದರೆ ಅದೊಂದು ಹಣ ಮಾಡುವ ದಾರಿ ಅಲ್ಲ. ಅದೊಂದು ಜವಾಬ್ದಾರಿ! ಸಾಮಾಜಿಕ ಜವಾಬ್ದಾರಿ. ಸಂಸ್ಥೆಯನ್ನು ಕಟ್ಟುತ್ತಿದ್ದೇವೆ ಎಂದರೆ ಸಮಾಜವನ್ನು ಕಟ್ಟುತ್ತಿದ್ದೇವೆ ಎಂದರ್ಥ. ಕಲೆಗೆ ಸಂಬಂಧ ಪಟ್ಟವರು, ಸಮಾಜಕ್ಕೆ ಒಳಿತಾಗುವ ಚಟುವಟಿಕೆಗಳನ್ನು ಸಂಘ ಟ್ರಸ್ಟ್ ಗಳಿಂದ ನಡೆಸಬೇಕು. ವ್ಯಕ್ತಿಗತ ಪ್ರತಿಷ್ಠೆಗಾಗಿ ಸ್ಥಾಪನೆಯಾದ ಸಂಸ್ಥೆಗಳು, ವ್ಯವಹಾರಗಳು ವೈಯುಕ್ತಿಕ ಲಾಭದ ಉದ್ದೇಶವನ್ನು ಹೊಂದಿರುತ್ತದೆ. ಇದರಿಂದ ಸಮಾಜಕ್ಕೆ ಅಷ್ಟೇನು ದೊಡ್ಡ ಕೊಡುಗೆ ಇರಲಾರದು. ಅಂತಹ ಸಂಘ ಸಂಸ್ಥೆ ಟ್ರಸ್ಟ್ ಗಳ ಮೇಲಿರುವ ಸಾರ್ವಜನಿಕ ಅಭಿಪ್ರಾಯವೂ ಬೇರೆಯದೇ ಆಗಿರುತ್ತದೆ. ವೈಯುಕ್ತಿಕ ಲಾಭ, ಕಾರ್ಯಕ್ರಮದಿಂದ ಸಂಪಾದನೆ ಮಾಡುವಂತಹಾ ಉದ್ದೇಶ ಇರುವವರಿಗೆ ಟ್ರಸ್ಟ್ ಕೆಲವೇ ವರ್ಷಗಳಲ್ಲಿ ನಿರಾಸೆ ಉಂಟು ಮಾಡಬಹುದು. ಪಟ್ಲ ಫೌಂಡೇಷನ್ ನಂತಹ ಟ್ರಸ್ಟ್ ಗಳು ಲಾಭದ ಹಾದಿಯಲ್ಲೇ ಇರಲಿ ನಷ್ಟದ ಹಾದಿಯಲ್ಲೇ ಇರಲಿ, ಸಮಾಜಕ್ಕೆ ಪ್ರತಿಷ್ಠೆ ಎನಿಸುವಂತಹಾ ಸೇವೆಗಳಿಗೆ ಬದ್ಧವಾಗಿದೆ.

ಸಾಮಾಜಿಕ ಜವಾಬ್ದಾರಿ, ಮಾನವೀಯ ಮೌಲ್ಯಗಳನ್ನು ಹೊಂದಿರುವಂತಹಾ ಟ್ರಸ್ಟ್ ಗಳು ರೂಪುಗೊಳ್ಳಬೇಕು. ಕಲಾವಿದ, ಕಲಾಭಿಮಾನಿ, ಯಾರೇ ಟ್ರಸ್ಟ್ ಸ್ಥಾಪನೆ ಮಾಡಿದರೂ ವಿವಿಧ ಕ್ಷೇತ್ರಗಳ ಪರಿಣಿತರ ಸಲಹೆ ಮಾರ್ಗದರ್ಶನ ಸ್ವೀಕರಿಸುವ ಮನೋಭಾವ ಯಕ್ಷಗಾನ ಕ್ಷೇತ್ರದ ಸಂಘ ಸಂಸ್ಥೆ ಟ್ರಸ್ಟ್ ಗಳಲ್ಲಿ

ಬರಬೇಕಿದೆ. ಈ ತಿಂಗಳಲ್ಲಿ ಕಲೆ ಮತ್ತು ಕಲಾವಿದರನ್ನು ಸಂಘಟಿಸುವ ನಿಟ್ಟಿನಲ್ಲಿ ಹಲವಾರು ಉತ್ತಮ ಗುರಿ ಉದ್ದೇಶ ಯೋಜನೆಗಳನ್ನು ಹಮ್ಮಿಕೊಂಡು ನಮ್ಮ ಸ್ನೇಹಿತರೋರ್ವರ ಟ್ರಸ್ಟ್ ಲೋಕಾರ್ಪಣೆಗೊಳ್ಳಲಿದೆ. ಯಕ್ಷಗಾನ ಕಲಾವಿದರಾಗಿರುವ ಕಿರಾಡಿ ಪ್ರಕಾಶ್ ರವರ ಮಹತ್ವಾಕಾಂಕ್ಷಿ ಯೋಜನೆ ಇದಾಗಿದ್ದು, ಈಗಾಗಲೇ ಸಂಪರ್ಕದಲ್ಲಿರುವ ಎಲ್ಲ ಪ್ರಮುಖರ ನೆರವು ಪಡೆದುಕೊಂಡು ಸಂಘಟನಾ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾರೆ. ಉತ್ತಮ ಮೌಲ್ಯಗಳನ್ನೇ ಬುನಾದಿಯಾಗಿ ರೂಪಿಸಿಕೊಂಡಿರುವ ಯಕ್ಷ ನಕ್ಷತ್ರ ಟ್ರಸ್ಟ್ ನ ಕನಸಿನ ಯೋಜನೆಗಳು ಯಶಸ್ವಿಯಾಗಲಿ ಹಾಗೂ ಸೆಪ್ಟೆಂಬರ್ ಮೂರರಂದು ಮಂದಾರ್ತಿಯಲ್ಲಿ ನಡೆಯುವ ಯಕ್ಷ ಪ್ರಣತಿ ಕಾರ್ಯಕ್ರಮ ಕಲಾಸೇವೆಗೊಂದು ಮಾದರಿಯಾಗಿ ಮೂಡಿ ಬರಲಿ ಎಂಬ ಆಶಯದೊಂದಿಗೆ, ***ನಿಮ್ಮವನೆ, ಗೋವಿಂದ ವಂಡಾರು***

---

## ಸಂಪಾದಕೀಯ

***ಆತ್ಮೀಯ ಓದುಗರೆ,***

ಯಕ್ಷಗಾನ ರಂಗ ಪ್ರದರ್ಶನಕ್ಕೆ ಬೇಕಾದ ಸಂಪನ್ಮೂಲಗಳು, ಅರಿವಿಗೆ ಬೇಕಾದ ಕೃತಿ, ಪುಸ್ತಕಗಳು, ಅಧ್ಯಯನ ಗ್ರಂಥಗಳು, ಯಕ್ಷಗಾನ ಕ್ಷೇತ್ರದಲ್ಲಿ ಧಾರಾಳವಾಗಿದೆ. ಕಲಾವಿದರಾಗಲೀ ಭಾಗವತರಾಗಲೀ, ಪ್ರಸಂಗಕರ್ತರೇ ಆಗಲಿ ಅಥವ ಕಲೆಯ ಬಗ್ಗೆ ಒಲವುಳ್ಳವರೇ ಆಗಲಿ ರಂಗ ಪ್ರದರ್ಶನಕ್ಕೆ ಸಂಬಂಧಿಸಿದ, ಪಾತ್ರಕ್ಕೆ ಮಾಹಿತಿಗಳು ಇಲ್ಲ ಎಂದು ಹೇಳುವಂತೆಯೇ ಇಲ್ಲ. ಅಷ್ಟೊಂದು ಸಮೃದ್ಧ ಮಾಹಿತಿ ಮೂಲಗಳಿವೆ. (ಯಕ್ಷಗಾನದಲ್ಲಿ ಪುರಾಣದ ಕಥೆಗಳಿಗೇ ಹೆಚ್ಚಿನ ಆದ್ಯತೆ ಇರುವುದರಿಂದ ಪುರಾಣ ಪ್ರಸಂಗಗಳನ್ನು ಗಮನದಲ್ಲಿರಿಸಿಕೊಂಡು ಹೇಳುತ್ತಿದ್ದೇನೆ.) ರಂಗದಲ್ಲಿ ಅದನ್ನು ಪ್ರಸ್ತುತ ಪಡಿಸಬೇಕೆಂದರೆ ಆ ಮೂಲಗಳನ್ನು ಶೋಧಿಸುವ ಕೆಲಸ ಕಲಾವಿದ ಮಾಡಬೇಕು ಅಷ್ಟೆ. ಒಬ್ಬೊಬ್ಬ ಕಲಾವಿದನ ರಂಗದ ಅನುಭವಗಳು, ಪಾತ್ರ ನಿರ್ವಹಣೆಗಳು ಒಂದೊಂದು ಪುಸ್ತಕಗಳಾಗಬಹುದು. ಅವು ಮುಂದಿನ ಪೀಳಿಗೆಗೆ ಮಾರ್ಗದರ್ಶಕವೂ ಆಗಬಹುದು. ನಿರ್ದಿಷ್ಟ ಪುರಾಣ ಪಾತ್ರಗಳ ಬಗ್ಗೆ, ಘಟನೆಗಳ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನ, ಸಂದರ್ಭದ ವಿವರಣೆ, ಒಳಾರ್ಥ, ಗೂಡಾರ್ಥಗಳು, ಇದರ ಟಿಪ್ಪಣಿ ಇವೆಲ್ಲ ತರಗತಿಯಲ್ಲಿ ಕೂತು ಕಲಿಯೋದಕ್ಕಾಗದು. ನಿರಂತರ ಓದು, ಅಧ್ಯಯನದ ಮೂಲಕವೇ ಈ ಜ್ಞಾನವನ್ನು ಪಡೆಯಲು ಸಾಧ್ಯ. ಕಲಾವಿದರಲ್ಲಿ ಓದುವ ಹವ್ಯಾಸ, ಪ್ರವೃತ್ತಿಯಾಗಬೇಕು ಅನ್ನೋದು ಒಂದು ಆಶಯವಾದರೆ ಅಂತಹ ಉಪಯುಕ್ತ ಪುಸ್ತಕಗಳಿದ್ದರೆ ಅದನ್ನು ಹಂಚಿಕೊಳ್ಳೋದೂ ಇದಕ್ಕೆ ಪೂರಕ. ಇತ್ತೀಚಿಗೆ ಪುರಾಣದ ಪಾತ್ರ ಘಟನೆಗಳನ್ನು ಸಮಗ್ರವಾಗಿ ಒಟ್ಟು ಹಾಕಿ ಖಚಿತ ಆಧಾರ ಹಾಗೂ ವಿವರಣೆಗಳನ್ನೊಳಗೊಂಡ ಪುರಾಣ ಪಾತ್ರ ಪ್ರದೀಪಿಕೆ ಅನ್ನೋವಂಥ ಕೃತಿ ಬಿಡುಗಡೆಯಾಗಿದೆ.

ಸಾಮಾಜಿಕ ಜಾಲತಾಣದ ಹಿರಿಯ ಸ್ನೇಹಿತರೊಬ್ಬರು ಪುರಾಣ ಪಾತ್ರ, ಕಥೆಗಳ ಹಿನ್ನಲೆ ಸಂದರ್ಭ ಘಟನೆಗಳನ್ನು ಸರಣಿ ಲೇಖನದ ಮೂಲಕ ಬರೆದು ಓದುಗರ ಗಮನ ಸೆಳೆದಿದ್ದರು. ಅವರ ಎಲ್ಲ ಬರಹಗಳೂ ಓದಿಸಿಕೊಂಡು ಹೋಗುವಂತಹ ಶೈಲಿಯನ್ನು ಹೊಂದಿದ್ದವು. ಅದಕ್ಕೆ ಬರುತ್ತಿದ್ದ ಪ್ರತಿಕ್ರಿಯೆಗಳೂ ಅದರಿಂದ ಎಷ್ಟು ಪ್ರಯೋಜನ ಪಡೆದುಕೊಂಡಿದ್ದಾರೆ ಅನ್ನೋದನ್ನು ತೋರಿಸುತ್ತಿತ್ತು. ಅಂತಹ ಸುಮಾರು ಪುರಾಣದ ಘಟನೆ ಪಾತ್ರಗಳನ್ನು ಕಲೆಹಾಕಿ ಪುರಾಣ ಪಾತ್ರ ಪ್ರದೀಪಿಕೆ ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ನನ್ನ ಅನಿಸಿಕೆಯಂತೆ ಯಕ್ಷಗಾನದ ಪಾತ್ರಧಾರಿಗಳು, ಕಥೆಗಾರರು, ಭಾಗವತರು, ನಿರ್ದೇಶಕರು ಅಷ್ಟೇ ಅಲ್ಲದೆ ಜ್ಞಾನ ಸಂಪಾದನೆಯ ಆಸಕ್ತಿ ಉಳ್ಳವರಿಗೆ ಬಹಳ ಉಪಯುಕ್ತವಾದ ಪುಸ್ತಕ ಎಂದು ದೃಢವಾಗಿ ಹೇಳಬಲ್ಲೆ. ಇಂತಹ ಪುಸ್ತಕ ಹಲವರ ರೆಫರೆನ್ಸ್ ಗೆ ಮುಂದೆ ಬಳಕೆಯಾಗಬೇಕು. ಈಗಿನ ದಿನಗಳಲ್ಲಿ ವಿಚಾರ ಸಂಗ್ರಹ ಮಾಡಿ ಪುಸ್ತಕ ರೂಪದಲ್ಲಿ ಹೊರ ತರೋದು ಸುಲಭದ ಕೆಲಸವಲ್ಲ. ಇದು ಸಾಕಷ್ಟು ಶ್ರಮ ಬೇಡುವ ಕೆಲಸ. ಒಬ್ಬ ವ್ಯಕ್ತಿ ಇಂತಹಾ ಕೆಲಸದಲ್ಲಿ ಕೈ ಹಾಕಬೇಕೆಂದರೆ ಆತನ ಆಸಕ್ತಿಯಿಂದ ಮಾತ್ರ ಸಾಧ್ಯವೇ ಹೊರತು, ಇದರಿಂದ ಸಣ್ಣ ಲಾಭವೂ ಇರಲಾರದು. ಇಂತಹ ಪ್ರಯತ್ನಕ್ಕೆ ಪ್ರೋತ್ಸಾಹಿಸುವವರ ಸಂಖ್ಯೆಯೂ ಕಡಿಮೆ. ಯಾಕೆದಂರೆ ಈಗಿನ ಜೆನರೇಷನ್ ತುಂಬ ಚ್ಯೂಸಿ. ತಮಗೆ ಬೇಕಾದ್ದನ್ನು ಮಾತ್ರ ಆರಿಸುತ್ತಾರೆ. ಖರೀದಿಸುತ್ತಾರೆ. ಆದರೆ ಪುರಾಣ ಪಾತ್ರ ಪ್ರದೀಪಿಕೆ ಯಾವುದೇ ಆಲೋಚನೆ ಮಾಡದೇ ಖರೀದಿಸಬಹುದಾದ ಪುಸ್ತಕ. ಪುರಾಣ ಎಂದರೆ ಜ್ಞಾನ ಮಾತ್ರವಲ್ಲ ಮೌಲ್ಯ, ಚಿಂತನೆಗೆ ಹಚ್ಚುವಂತಹ ಘಟನಾವಳಿಗಳು, ತಿಳಿದಿರದ ಅನೇಕ ಕಥೆಗಳೆಡೆ ಗಮನ ಸೆಳೆಯುವ ಅಮೂಲ್ಯ ಕೃತಿಯಿದು.

ದಾಮೋದರ ಶೆಟ್ಟಿ ಇರುವೈಲ್ ಇವರು ಹವ್ಯಾಸಿ, ಅನುಭವಿ ಯಕ್ಷಗಾನದ ಕಲಾವಿದರೂ ಹೌದು. ಅವರ ಆಸಕ್ತಿಯ ಫಲವಾಗಿ ಪುರಾಣ ಕಥೆಗಳ ಗುಚ್ಛ ಪುರಾಣ ಪಾತ್ರ ಪ್ರದೀಪಿಕೆ ರೂಪುಗೊಂಡಿದೆ. ಈ ಪುಸ್ತಕದ ಉಪಯುಕ್ತತೆ ಬಗ್ಗೆ ಓದುಗರೊಬ್ಬರ ಅನಿಸಿಕೆ ಹೀಗಿದೆ.

"ದಾಮೋದರ ಶೆಟ್ಟಿ ಇರುವೈಲು ಅವರ ಪೌರಾಣಿಕ ಪಾತ್ರ ಪರಿಚಯಗಳ ಬರಹಗಳು ಅಧ್ಯಾಪಕನಾದ ನನ್ನನ್ನು ಸಹಜವಾಗಿ ಆಕರ್ಷಿಸಿದವು. ಪ್ರಾಚೀನ ಕನ್ನಡ ಕಾವ್ಯಗಳನ್ನು ಪಾಠ ಮಾಡುವಾಗ ಅನೇಕ ಸಂದರ್ಭಗಳಲ್ಲಿ ಪೌರಾಣಿಕ ಪಾತ್ರಗಳ ವಿವರಗಳನ್ನು ತಿಳಿಯಲು ಪುರಾಣ ನಾಮ ಚೂಡಾಮಣಿ ಎಂಬ ಗ್ರಂಥದ ಸಹಾಯ ಪಡೆಯುತ್ತಿದ್ದೆ. ಅಲ್ಲಿಯಷ್ಟು ವಿವರವಾಗಿ ಅಲ್ಲವಾದರೂ ಪಾತ್ರಗಳಿಗೆ ಅಗತ್ಯವಾದಷ್ಟು ವಿವರಗಳು ಅವರ ಟಿಪ್ಪಣಿ ರೂಪದ ಲೇಖನಗಳಲ್ಲಿ ಇರುತ್ತಿದ್ದವು. ಹಾಗೆ ಬರೆದ ಪಾತ್ರ ಚಿತ್ರಣಗಳ ಜೊತೆಗೆ ಮತ್ತೆ ಹಲವು ಪಾತ್ರಗಳ ಪರಿಚಯವನ್ನು ಸೇರಿಸಿ, ಪುರಾಣ ಪಾತ್ರ ಪ್ರದೀಪಿಕೆ ಎಂಬ ಶೀರ್ಷಿಕೆಯಲ್ಲಿ ಪುಸ್ತಕ ಪ್ರಕಟಿಸಿದ್ದಾರೆ. ಪುರಾಣ ಪಾತ್ರಗಳ ಕುತೂಹಲಿಗಳ ಕುತೂಹಲವನ್ನು ತಣಿಸುವಲ್ಲಿ ಈ ಪುಸ್ತಕ ಖಂಡಿತವಾಗಿ ಯಶಸ್ವಿಯಾಗುತ್ತದೆ. ಪುರಾಣ ಪಾತ್ರಗಳ ಜೊತೆಗೆ, ಚಕ್ರವ್ಯೂಹದ ಸ್ವರೂಪ, ಅಕ್ಷೋಹಿಣಿಯ ಲೆಕ್ಕಾಚಾರ, ಹಲವು ನ್ಯಾಯಗಳ ಪರಿಚಯ, ಅರವತ್ತನಾಲ್ಕು ವಿದ್ಯೆಗಳು– ಹೀಗೆ ಹಲವು ವಿಷಯಗಳನ್ನು ಒಳಗೊಂಡ ಈ ಪುಸ್ತಕ ಪೌರಾಣಿಕ ಅರಿವನ್ನು ವಿಸ್ತರಿಸಲು ಸಹಾಯಕವಾಗಿದೆ."

ಪುಸ್ತಕ ಬಂದು ತಲುಪಿದೆ. ಪುರಾಣ ಪ್ರದೀಪಿಕೆಯ ಪುಟ ತೆರೆದು ಓದಲು ನಾನು ಕಾತರಳಾಗಿದ್ದೇನೆ. ಇಲ್ಲಿ ಬರಹಗಾರರ ಶ್ರಮವನ್ನೂ ನಾವು ಗುರುತಿಸಬೇಕಿದೆ. ಪುಸ್ತಕ ನಿಮಗೂ ಬೇಕೆನಿಸಿದರೆ ಈ ಸಂಖ್ಯೆಗೆ ಕರೆ ಮಾಡಿ ಲೇಖಕರನ್ನು ಸಂಪರ್ಕಿಸಬಹುದು 9820393098

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

# ಯಕ್ಷಗಾನ ಸಂಘಟನೆಯಲ್ಲಿ ಸ್ತ್ರೀ ಶಕ್ತಿ

**“ಸಂಘೇ ಶಕ್ತಿ ಕಲೌಯುಗೇ”** ಎಂಬ ಮಾತೊಂದಿದೆ. ಅಂತೆಯೇ ಈ ಸಂಘವನ್ನು ಮಾಡುವುದು ಸುಲಭವಲ್ಲ. ಅರ್ಥಾತ್ ಅನೇಕರನ್ನು ಒಗ್ಗೂಡಿಸಿ ಆಗಬೇಕಾದ್ದನ್ನು ಮಾಡುವುದಕ್ಕೆ ತಾಳ್ಮೆ ಮುಖ್ಯ ಅಸ್ತ್ರ. ಇದು ಯಾವುದೇ ಕ್ಷೇತ್ರವಿರಲಿ, ಸಂಘಟನೆ ಸುಲಭದ ಕಾರ್ಯವಲ್ಲ. ಎಲ್ಲರನ್ನೂ ಸೇರಿಸುವುದೇ ಒಂದು ಸಾಹಸವಾದರೆ, ಅನೇಕ ವಿಭಿನ್ನ ಮನಸ್ಥಿತಿಯಿರುವ ಮನಸ್ಸುಗಳನ್ನು ಒಗ್ಗೂಡಿಸುವುದು ಮತ್ತೊಂದು ಸಾಹಸ. ಅವರೆಲ್ಲರನ್ನು ಸೇರಿಸಿ ಒಂದು ಕಾರ್ಯಕ್ರಮ ಮಾಡುವುದು ಇನ್ನೊಂದು ಸಾಹಸ. ಯಾಕೆಂದರೆ ಎಲ್ಲರೂ ಒಂದೇ ಅಭಿಪ್ರಾಯಕ್ಕೋ, ಮನಸ್ಥಿತಿಗೋ ಬದ್ಧರಾಗುವುದಿಲ್ಲವಲ್ಲ. ಹಾಗಾಗಿ ಇಂತಹ ಸಂಘಟನಾ ಕ್ಷೇತ್ರಕ್ಕೆ ಇಳಿಯುವವರನ್ನು ಮೆಚ್ಚಬೇಕಾದ್ದೇ.



ಯಕ್ಷಗಾನ ಕ್ಷೇತ್ರದಲ್ಲಿ ಸಂಘಟನೆ ಎನ್ನುವುದು ಸುಲಭವಲ್ಲ. ಕಾರ್ಯಕ್ರಮವನ್ನು ಆಯೋಜಿಸುವುದು, ಕಲಾವಿದರನ್ನು ಸೇರಿಸುವುದು, ಅಥವಾ ಬೇರೆಯವರು ಆಯೋಜಿಸಿದ ಕಾರ್ಯಕ್ರಮಕ್ಕೆ ಅವರ ಆಹ್ವಾನದ ಮೇರೆಗೆ ತಂಡವನ್ನು ಕಟ್ಟಿ ಕರೆದೊಯ್ಯುವುದು. ಇದೆಲ್ಲವೂ ಒಂದು ಕಡೆಯಾದರೆ, ಅನಿವಾರ್ಯ ಕಾರಣಗಳಿಂದ ಕೊನೆಗಳಿಗೆಗೆ ಕಲಾವಿದರು ಬಾರದಿದ್ದಾಗ ಬೇರೊಬ್ಬ ಕಲಾವಿದರನ್ನು ಕರೆಯುವುದು, ಅದೂ ಕೊನೆಕ್ಷಣಕ್ಕೆ ಕರೆದದ್ದು ಎಂಬ ಆ ಕಲಾವಿದನ ಮನದ ನೋವಿಗೆ ಕಾರಣರಾಗುವುದು, ಕಾರ್ಯಕ್ರಮವನ್ನು ಆಯೋಜಿಸಿದವನು ಸರಿಯಾಗಿ ಕಲಾವಿದರ ಗೌರವಧನವನ್ನು ನೀಡದಿದ್ದಾಗ ತನ್ನ ಕೈಸುಟ್ಟುಕೊಳ್ಳುವುದು. ಅದೆಷ್ಟೋ ಬಾರಿ ತನ್ನ ಖರ್ಚಿನಿಂದಲೇ ಕಾರ್ಯಕ್ರಮ ಮಾಡಬೇಕಾಗಿ ಬರುವುದು. ಎಲ್ಲೋ ಒಂದಿಬ್ಬರು ಕಾರ್ಯಕ್ರಮವನ್ನು ಸಂಘಟಿಸಿ ದುಡ್ಡು ಮಾಡಿದ ಕಾರಣದಿಂದ, ಎಲ್ಲಾ ಸಂಘಟಕರೂ ಹಣ ಮಾಡುವುದಕ್ಕಾಗಿಯೇ ಕಾರ್ಯಕ್ರಮ ಮಾಡುವುದು ಎಂಬ ವೃಥಾ ಅಪವಾದಕ್ಕೆ ಗುರಿಯಾಗುವುದು. ಇದೆಲ್ಲವೂ ಸಂಘಟಕನಾದವ ಅನುಭವಿಲೇಬೇಕಾದ ವಿಷಯಗಳು. ಇದನ್ನು ಬಿಟ್ಟರೆ ಆತ ಸಂಘಟಕನಲ್ಲ. ಯಾಕೆಂದರೆ ಸಂಘಟನೆ ಎನ್ನುವಂತದ್ದೇ ಅಂತಹದ್ದು. ಇವತ್ತು ಅನೇಕ ಪುರುಷ ಯಕ್ಷಗಾನ ಸಂಘಟಕರನ್ನು ನಾವು ಕಾಣುತ್ತೇವೆ. ಮಹಿಳೆಯೋರ್ವಳು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದೆಂದರೆ ಅದು ಸುಲಭದ ಮಾತಲ್ಲ.



ಅಂತಹ ಮಹಿಳಾ ಸಂಘಟಕಿಯರ ಕುರಿತಾಗಿ ನನ್ನ ಮಿತಿಯಲ್ಲಿ ಒಂದಿಷ್ಟು ವಿಚಾರಗಳನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ. ಮುಖ್ಯವಾಗಿ ಮಹಿಳಾ ಕಲಾವಿದೆಯರನ್ನು ಸೇರಿಸಿ ಮಾಡಿದ ಸಂಘವೋ ಅಥವಾ ತಂಡವೋ ಅದರ ಬಗ್ಗೆ ಮತ್ತೆ ಅನಿವಾರ್ಯತೆಗೋ ಅಥವಾ ಉದ್ದೇಶಪೂರ್ವಕವೋ ಪುರುಷ ಕಲಾವಿದರನ್ನು ಸಂಘಟಿಸಿ ಮಾಡಿದ ಯಕ್ಷಗಾನ ಕಾರ್ಯಕ್ರಮಗಳೂ ಇರಬಹುದು. ಒಟ್ಟಾರೆಯಾಗಿ ಯಕ್ಷಗಾನ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸಂಘಟನೆಯನ್ನು ಇಲ್ಲಿ ಕಾಣಿಸುತ್ತಿದ್ದೇನೆ. ತಾಳಮದ್ದಳೆ ಕ್ಷೇತ್ರವನ್ನು ನಾನಿಲ್ಲಿ ಪ್ರವೇಶಿಸಿಲ್ಲ.

***ಶ್ರೀಮತಿ ಅಕ್ಕಾಣಿಯಮ್ಮ*** – 1979–80 ರಲ್ಲಿ ಮಹಿಳಾ ಯಕ್ಷಗಾನ ಕಲಾಮಿತ್ರ ಮಂಡಳಿಯನ್ನು ಹುಟ್ಟುಹಾಕಿದರು. ಮಹಿಳೆಯರನ್ನೇ ಒಗ್ಗೂಡಿಸಿ, ಅನೇಕ ಪ್ರದರ್ಶನಗಳನ್ನು ಏರ್ಪಡಿಸಿದರು. ಮಿಸ್ ಇಂಡಿಯಾ ಖ್ಯಾತಿಯ ರೇಖಾ ಹಂದೆ, ಸಿನಿಮಾ ತಾರೆ ಕಾವೇರಿ, ಸುಜಾತ ಐತಾಳ್, ನೃಪಾಂಗಿ ಅಯ್ಯಂಗಾರ್ ಮುಂತಾದ ಅನೇಕರನ್ನು ಯಕ್ಷಗಾನ ಕ್ಷೇತ್ರಕ್ಕೆ ಪರಿಚಯಿಸಿದವರು.

ಡಾ.ವಿಜಯನಳಿನಿ ರಮೇಶ್–1980ರಲ್ಲಿ ಶಿರಸಿಯಲ್ಲಿ ಸಹ್ಯಾದ್ರಿ ಮಕ್ಕಳ ಯಕ್ಷಗಾನದ ಸಮೂಹವನ್ನು ಆರಂಭಿಸಿದರು. ಇದು ಸುಮಾರು ಆರೇಳು ವರ್ಷ ನಡೆಯಿತು. ಮುಂದಕ್ಕೆ ಇದೇ ತಂಡದಲ್ಲಿದ್ದ ಹೆಮ್ಮಕ್ಕಳನ್ನು ಸೇರಿಸಿ ಸಹ್ಯಾದ್ರಿ ಮಹಿಳಾ ಯಕ್ಷಗಾನ ಸಮೂಹವನ್ನು ಕೂಡ ಆರಂಭಿಸಿದರು. ಈ ಸಮಯ ಸಮೂಹ ಇವತ್ತಿಗೂ ಯಕ್ಷಗಾನ ಪ್ರದರ್ಶನಗಳನ್ನು ನೀಡುತ್ತಾ ಬಂದಿದೆ. ಹೊಸ್ತೋಟ ಮಂಜುನಾಥ ಭಾಗವತರು ಇದಕ್ಕೆ ನಿರ್ದೇಶಕರಾಗಿದ್ದರು.

***ಶ್ರೀಮತಿ ಶೀಲಾ ಕೆ. ಶೆಟ್ಟಿ*** – ಲೇಖಕಿ ಹಾಗೂ ಕವಯಿತ್ರಿಯಾಗಿರುವ ಇವರು ಎರ್ಮಾಳಿನಲ್ಲಿ 'ಶ್ರೀನಿಧಿ ಮಹಿಳಾ ಯಕ್ಷಕಲಾರಂಗ' ವನ್ನು ಸ್ಥಾಪಿಸಿ, ಅನೇಕೆಡೆಗಳಲ್ಲಿ ಪ್ರದರ್ಶನಗಳನ್ನು ನೀಡಿದವರು.

***ಶ್ರೀಮತಿ ರತ್ನಾವತಿ ಕೆ. ಭಟ್ ತಲಂಜೇರಿ***–ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದ ರತ್ನಾ ಭಟ್ 1989 ರಲ್ಲಿ ಅಡ್ಯನಡ್ಕದಲ್ಲಿ ಮಹಿಳಾ ಮಂಡಲಿಯವರನ್ನು ಸೇರಿಸಿ ಯಕ್ಷಗಾನ ತಂಡವನ್ನು ಕಟ್ಟುತ್ತಾರೆ. ಹಳ್ಳಿ ಪ್ರದೇಶದ ಯುವತಿಯರನ್ನು, ಮಹಿಳೆಯರನ್ನು ಒಟ್ಟುಸೇರಿಸಿ ರಾಜ್ಯಾದ್ಯಂತ ಸುಮಾರು ಆರುನೂರಕ್ಕೂ ಮಿಕ್ಕಿ ಯಕ್ಷಗಾನ ಪ್ರದರ್ಶನಗಳನ್ನು ಅಡ್ಯನಡ್ಕದ ಮಹಿಳಾ ಯಕ್ಷಗಾನ ಸಂಘ ಇವರ ನೇತೃತ್ವದಲ್ಲಿ ಕೊಟ್ಟಿದೆ ಎನ್ನುವುದು ಒಂದು ಹೆಮ್ಮೆಯ ವಿಷಯ.

ಶ್ರೀಮತಿ ಪೂರ್ಣಿಮಾ ಯತೀಶ್ ರೈ – 1989 ರಲ್ಲಿ ಇವರ ಅಣ್ಣ ಮಾಧವ ಎಸ್ ಶೆಟ್ಟಿ ಬಾಳ ಇವರು 1989ರಲ್ಲಿ ಶ್ರೀ ಮಹಾಗಣಪತಿ ಮಕ್ಕಳ ಮತ್ತು ಮಹಿಳಾ

ಯಕ್ಷಗಾನ ಸಂಘ, ಬಾಳ, ಕಾಟಿಪಳ್ಳ ವನ್ನು ಸ್ಥಾಪಿಸುತ್ತಾರೆ. ಮುಂದಕ್ಕೆ ಸುಮಾರು 25 ವರ್ಷಗಳಿಂದೀಚೆಗೆ ಆ ತಂಡವನ್ನು ಮುನ್ನಡೆಸುತ್ತಿರುವವರು ಪೂರ್ಣಿಮಾ ರೈ ಯವರು. ಇವರ ತಂಡ ಯಕ್ಷಗಾನ ಸ್ಪರ್ಧೆಯಲ್ಲಿ 90 ರ ದಶಕದಲ್ಲೇ ಪ್ರಶಸ್ತಿ ವಿಜೇತ ತಂಡ. ಅನೇಕ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಯಕ್ಷಗಾನವನ್ನು ಕಲಿಸಿ, ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ನೀಡಿದವರು ಇವರು. ಇವತ್ತಿಗೂ ಮಹಿಳಾ ತಂಡಗಳಲ್ಲಿ ತೆಂಕುತಿಟ್ಟಿನಲ್ಲಿ ಮೇಲ್ ಸ್ತರದಲ್ಲಿ ಈ ತಂಡ ನಿಲ್ಲುತ್ತದೆ.

***ಶ್ರೀಮತಿ ವಿದ್ಯಾ ಕೋಳ್ಯೂರು*** – 'ಯಕ್ಷಮಂಜೂಷಾ' (ರಿ) ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ, ನಮ್ಮ ದೇಶ ಮಾತ್ರವಲ್ಲದೇ ಹೊರದೇಶಗಳಲ್ಲೂ ಪುರುಷ ಕಲಾವಿದರನ್ನು ಕರೆದುಕೊಂಡು ಹೋಗಿ ಪ್ರದರ್ಶನ ನೀಡಿ ಸೈ ಅನಿಸಿಕೊಂಡ ಗಟ್ಟಿಗಿತ್ತಿ.

***ಶ್ರೀಮತಿ ಗೀತಾ ಎಲ್.ಭಟ್*** – ಬಂಟ್ವಾಳ ಬಿಸಿರೋಡಿನವರಾದ ಗೀತಾ ಭಟ್ ಅವರು ಮದುವೆಯಾಗಿ ಮುಂಬಯಿಗೆ ಹೋದಾಗ ಅಲ್ಲಿ ಪತಿ ಲಕ್ಷ್ಮೀಶ ಅವರ ಸಹಕಾರದಿಂದ 1997 ರಲ್ಲಿ ಮಕ್ಕಳ ಮತ್ತು ಮಹಿಳೆಯರ ತಂಡ ಕಟ್ಟಿ ಅನೇಕ ಪ್ರದರ್ಶನಗಳನ್ನು ನೀಡಿದ್ದಾರೆ.




***ಶ್ರೀಮತಿ ಜ್ಯೋತಿ ಟಿ.ಎನ್.ಕಳಸ*** – "ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ (ರಿ)" ಯನ್ನು ಕಳಸದ ಹಳುವಳ್ಳಿಯಲ್ಲಿ ಸ್ಥಾಪಿಸಿ, ಮಕ್ಕಳ ಜೊತೆ ಆಸಕ್ತ ಮಹಿಳೆಯರನ್ನೂ ಸೇರಿಸಿಕೊಂಡು ಅವರಿಗೆ ಯಕ್ಷಗಾನವನ್ನು ಕಲಿಸಿ, ಪ್ರದರ್ಶನಗಳನ್ನು ನೀಡಿ ಜನಮೆಚ್ಚುಗೆ ಪಡೆದರು.

***ಶ್ರೀಮತಿ ಯೋಗಾಕ್ಷಿ ಗಣೇಶ್ ತಲಕಳ*** – ಪ್ರಸ್ತುತ ತಲಕಳ ಮೇಳದ ಸಂಚಾಲಕಿ, ಶ್ರೀಶ ಯಕ್ಷಗಾನ ಕಲಾ ತರಬೇತಿ ಕೇಂದ್ರ ಎನ್ನು ಸಂಸ್ಥೆಯನ್ನು ಸ್ಥಾಪಿಸಿ, ಮಕ್ಕಳಿಗೆ ಮತ್ತು ಮಹಿಳೆಯರಿಗೆ ಯಕ್ಷಗಾನ ಹಿಮ್ಮೇಳ ಮತ್ತು ಮುಮ್ಮೇಳ ತರಬೇತಿ ನೀಡಿ ಪ್ರದರ್ಶನಗಳನ್ನು ನೀಡುತ್ತಾ ಬಂದಿದ್ದಾರೆ.

***ಶ್ರೀಮತಿ ನಾಗವೇಣಿ ಮಂಚಿ*** – ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿರುವ ಇವರು ಮಹಿಳಾ ತಂಡವನ್ನು ಕಟ್ಟಿ ಅನೇಕ ಕಡೆಗಳಲ್ಲಿ ಪ್ರದರ್ಶನಗಳನ್ನು ನೀಡಿರುತ್ತಾರೆ.

***ಶ್ರೀಮತಿ ಸುಮಾ ಗಡಿಗೆಹೊಳೆ*** – 'ಕಾಶ್ಯಪ ಪ್ರತಿಷ್ಠಾನ ಮಹಿಳಾ ಯಕ್ಷಗಾನ ಮಂಡಳಿ ಗಡಿಗೆಹೊಳೆ' ಯ ಪ್ರಮುಖ ಪಾತ್ರಧಾರಿ. 'ಯಕ್ಷಕಲಾಸಂಗಮ ಶಿರಸಿ (ರಿ) ಎಂಬ ತರಬೇತಿ ಕೇಂದ್ರದ ಮೂಲಕ ಅನೇಕರಿಗೆ ಯಕ್ಷಗಾನವನ್ನು ಕಲಿಸುತ್ತಿದ್ದಾರೆ.

***ಶ್ರೀಮತಿ ಕಿರಣ್ ಆರ್ ಪೈ ಶಿವಮೊಗ್ಗ*** – ಇವರ ಕನಸಿನ ಕೂಸು "ಸುಮುಖ ಕಲಾಕೇಂದ್ರ". ಈ ಕೇಂದ್ರದಲ್ಲಿ 25–30 ಮಕ್ಕಳು ಮತ್ತು ಮಹಿಳೆಯರು ಯಕ್ಷಗಾನ ಕಲಿಯುತ್ತಿದ್ದಾರೆ, ಕಲಿತು ಪ್ರದರ್ಶನಗಳನ್ನೂ ನೀಡುತ್ತಿದ್ದಾರೆ.

***ಶ್ರೀಮತಿ ನಿರ್ಮಲಾ ಹೆಗಡೆ ಗೋಳಿಕೊಪ್ಪ*** – 2017 ರ ಜೂನ್ 25 ಕ್ಕೆ "ಯಕ್ಷಗೆಜ್ಜೆ(ರಿ)" ಮಹಿಳಾ ಮತ್ತು ಮಕ್ಕಳ ತರಬೇತಿ ಕೇಂದ್ರವನ್ನು ಸ್ಥಾಪಿಸುತ್ತಾರೆ. ಈ ಕೇಂದ್ರದಡಿಯಲ್ಲಿ ಆಸಕ್ತರಿಗೆ ಸಾಂಪ್ರದಾಯಿಕ ಯಕ್ಷಗಾನ ಕುಣಿತಗಳ ತರಬೇತಿಯನ್ನು ನೀಡುತ್ತಾರೆ. ಇವರ ತಂಡ ಪ್ರದರ್ಶನಗಳನನು ಕೂಡ ನೀಡುತ್ತಾ ಬಂದಿದೆ.

***ಶ್ರೀಮತಿ ಮಯೂರಿ ಉಪಾಧ್ಯಾಯ*** – ಹದಿನೈದು ವರ್ಷಗಳ ಹಿಂದೆ ಸ್ವತಃ ಮಯೂರಿ ಉಪಾಧ್ಯಾಯ ಅವರು ಆರಂಭಿಸಿದ "ಯಕ್ಷಸಿರಿ ಬೆಂಗಳೂರು (ರಿ)" ಎಂಬ ಮಹಿಳಾ ತಂಡ ಇಂದಿಗೂ ಅನೇಕ ಕಡೆಗಳಲ್ಲಿ ಪ್ರದರ್ಶನಗಳನ್ನು ನೀಡುತ್ತಾ ಇದೆ. ಶ್ರೀಮತಿ ಸುಮಂಗಲಾ ರತ್ನಾಕರ್ ರಾವ್ – 'ಯಕ್ಷಾರಾಧನಾ ಕಲಾಕೇಂದ್ರ (ರಿ)' ಸಂಸ್ಥೆಯ ಸ್ಥಾಪಕಿ. ಮಕ್ಕಳು ಮತ್ತು ಮಹಿಳೆಯರನ್ನು ಸೇರಿಸಿಕೊಂಡು ಯಕ್ಷಗಾನವನ್ನು ಕಲಿಸಿ, ತಂಡಕಟ್ಟಿ, ಪ್ರದರ್ಶನಗಳನ್ನು ನೀಡುತ್ತಾ ಬಂದಿದ್ದಾರೆ.

***ಶ್ರೀಮತಿ ಆರತಿ ಪಟ್ರಮೆ*** – ವೃತ್ತಿಯಲ್ಲಿ ಉಪನ್ಯಾಸಕಿಯಾಗಿದ್ದು, ಪ್ರವೃತ್ತಿಯಲ್ಲಿ ಲೇಖಕಿ, ಯಕ್ಷಗಾನ ಕಲಾವಿದೆಯಾಗಿರುವ ಇವರು ಯಕ್ಷದೀವಿಗೆ (ರಿ) ತುಮಕೂರು ಎನ್ನುವ ಸಂಸ್ತೇಯುನ್ನು ಸ್ಥಾಪಿಸಿ, ತರಬೇತಿ ನೀಡಿ, ಮಕ್ಕಳು, ಮಹಿಳೆಯರು ಮತ್ತು ಪುರುಷ ಕಲಾವಿದರನ್ನು ಸೇರಿಸಕೊಂಡು ಪ್ರದರ್ಶನ ನೀಡುತ್ತಾ ಬಂದಿದ್ದಾರೆ.

ಶ್ರೀಮತಿ ಅನಸೂಯಾ ಈಶ್ವರಚಂದ್ರ ರಾವ್ – 1995 ರಲ್ಲಿ. ಮಂಚಿಯಲ್ಲಿ ಶ್ರೀ ಕಲಶವೆಂಬ ಮಹಿಳಾ ಯಕ್ಷಗಾನ ಸಂಘದ ಸ್ಥಾಪನೆ ಮಾಡುತ್ತಾರೆ. ನಾಡಿನ ಅನೇಕ ಕಡೆಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿ ಜನಮನ್ನಣೆಗೆ ಪಾತ್ರರಾಗಿದ್ದಾರೆ

***ಶ್ರೀಮತಿ ಸುಮಂಗಲಾ ದೇಸಾಯಿ*** – ಇವರು ಜನನಿಬಿಡ ಪ್ರದೇಶದಲ್ಲಿ 'ಸಪ್ತಸ್ವರ ಸೇವಾ ಸಂಸ್ಥೆ ಜೊಯ್ಡಾ, ದಾಂಡೇಲಿ.' ಎನ್ನುವ ಮಹಿಳಾ ತಂಡವನ್ನು ಸ್ಥಾಪಿಸಿ, ಮಹಿಳೆಯರನ್ನು ಸೇರಿಸಿ, ಆನಂದ ಅಂಕೋಲಾ ಅವರ ನಿರ್ದೇಶನದಲ್ಲಿ ಯಕ್ಷಗಾನ ಕಲಿತು ಅನೇಕ ಪ್ರದರ್ಶನಗಳನ್ನು ನೀಡಿದ್ದಾರೆ.

***ಶ್ರೀಮತಿ ನಾಗರತ್ನ ಹೇರಳೆ*** – ಲಹರಿ ಕಲಾ ರಂಗ ಮೂಡುಗಿಳಿಯಾರು ಎನ್ನುವ ಮಕ್ಕಳು ಮತ್ತು ಮಹಿಳಾ ತಂಡವನ್ನು ಕಟ್ಟಿದವರು ಇವರು. ಸುಮಾರು ಎಂಟು ವರ್ಷಗಳಿಂದ ಈ ತಂಡ ಯಕ್ಷಗಾನ ಪ್ರದರ್ಶನಗಳನ್ನು ನೀಡುತ್ತಾ ಬಂದಿದೆ.

***ಶ್ರೀಮತಿ ಪ್ರೇಮಾ ಕಿಶೋರ್*** – 'ಸಾಯಿ ಕಲಾ ಯಕ್ಷ ಬಳಗ ಬಾಲವನ, ಪುತ್ತೂರು' ಇದನ್ನು ಸ್ಥಾಪಿಸಿ, ಮಕ್ಕಳು ಮತ್ತು ಮಹಿಳೆಯರನ್ನು ಸೇರಿಸಿ ಯಕ್ಷಗಾನ ಪ್ರದರ್ಶನಗಳನ್ನು ನೀಡುತ್ತಾ ಬಂದಿದ್ದಾರೆ.

***ಶ್ರೀಮತಿ ಉಷಾ ಸುಬ್ರಹ್ಮಣ್ಯ ಶೆಟ್ಟಿ ಒಡಿಯೂರು*** – ಮಕ್ಕಳು ಮತ್ತು ಮಹಿಳೆಯರನ್ನು ಸೇರಿಸಿ ಸಾತ್ವಿಕ ತೇಜ ಕಲಾಕೇಂದ್ರ (ರಿ) ಒಡಿಯೂರು ತಂಡವನ್ನು ಸ್ಥಾಪಿಸಿ ಪ್ರದರ್ಶನ ನೀಡಿಕೊಂಡು ಬರುತ್ತಿದ್ದಾರೆ.

***ಶ್ರೀಮತಿ ಅರ್ಪಿತಾ ಹೆಗಡೆ*** – ಬೆಂಗಳೂರಿನ ಸಿರಿಕಲಾ ಮೇಳ (ರಿ) ಅನ್ನು ಮುನ್ನಡೆಸುವುದರ ಜೊತೆಗೆ ಅನೇಕ ಮಹಿಳಾ ಹಾಗೂ ಪುರುಷ ಕಲಾವಿದರನ್ನು ಆಹ್ವಾನಿಸಿ ಯಕ್ಷಗಾನ ಪ್ರದರ್ಶನಗಳನ್ನು ಸಂಘಟಿಸಿದ್ದಾರೆ.

***ನಾಗಶ್ರೀ ಜಿ.ಎಸ್.*** – ಶ್ರೀ ಕಾಳಿಂಗ ಯಕ್ಷಕಲಾ ವೈಭವ ಎನ್ನುವ ಸಂಸ್ಥೆಯ ಜೊತೆಗೆ ಟೀಮ್ ಉತ್ಸಾಹಿ ಎನ್ನುವ ತಂಡದ ನೇತೃತ್ವವನ್ನೂ ವಹಿಸಿದ್ದಾರೆ.

***ಶ್ರೀಮತಿ ಪುಷ್ಪಾ ಪ್ರಭಾಕರ್ ಕುಕ್ಕಾಜೆ*** – ಶ್ರೀ ಸಿದ್ಧಿವಿನಾಯಕ ಯಕ್ಷಗಾನ ಮಂಡಳಿಯ ಸ್ಥಾಪಕಿ. ಮಕ್ಕಳು ಮತ್ತು ಮಹಿಳೆಯರನ್ನು

ಸೇರಿಸಿ ಪ್ರದರ್ಶನಗಳನ್ನು ನೀಡುತ್ತಾ ಬಂದಿದೆ.

***ಶ್ರೀಮತಿ ಸಾಯಿಸುಮಾ ನಾವಡ*** –ಯಕ್ಷಾವಾಸ್ಯಮ್ ಕಾರಿಂಜ (ರಿ) ಅನ್ನುವ ಸಂಸ್ಥೆಯನ್ನು ಸ್ಥಾಪಿಸಿ, ಹಿಮ್ಮೇಳ ಮತ್ತು ಮುಮ್ಮೇಳ ತರಬೇತಿಯ ಜೊತೆಗೆ, ಮಕ್ಕಳು ಮತ್ತು ಮಹಿಳೆಯರು ಜೊತೆಗೆ ಪುರುಷ ಕಲಾವಿದರನ್ನು ಸಂಘಟಿಸಿ ಯಕ್ಷಗಾನ ಪ್ರದರ್ಶನಗಳನ್ನು ಸಂಯೋಜಿಸಿದ ಅನುಭವ.

ಇವಿಷ್ಟು ನನ್ನ ಮಿತಿಯೊಳಗಿನ ಮಾಹಿತಿ. ಇನ್ನೂ ಮುನ್ನೆಲೆಗೆ ಬಾರದ ಅದೆಷ್ಟೋ ಮಹಿಳಾ ಸಂಘಟಕಿಯರಿದ್ದಾರೆ. ಅವರೆಲ್ಲರ ಪರಿಚಯವೂ ಯಕ್ಷಲೋಕಕ್ಕಾಗಲಿ ಎಂದು ಆಶಿಸೋಣ.

***ಲೇಖಕರು – ಸಾಯಿ ಸುಮಾ ಎಂ ನಾವುಡ***

---

# ಯಕ್ಷಗಾನದ ಚಿಕ್ಕ ರೂಪ ಚಿಕ್ಕಮೇಳ

**ಬ**ಯಲಾಟದ ಮೇಳಗಳು ಊರಿಂದೂರಿಗೆ ತಿರುಗಾಡಿ ಪ್ರದರ್ಶನ ನೀಡುವ ಮೇಳಗಳಾದರೆ, ಮನೆಗೆ ಬಂದು ತಿರುಗಿ ಪ್ರದರ್ಶನ ನೀಡುವ ಚಿಕ್ಕ ತಂಡವೇ "ಚಿಕ್ಕಮೇಳ". ಹಿಂದಿನ ಕಾಲದಲ್ಲಿ "ದಾನಾವರ್ತ" ಅಥವಾ "ರಾಧಾಕೃಷ್ಣ" ಎಂಬ ಹೆಸರುಗಳಿಂದ "ಚಿಕ್ಕ ಮೇಳ" ಪರಿಚಿತವಾಗಿತ್ತು. ಬಯಲಾಟ ಮೇಳ ಹಾಗೂ ಚಿಕ್ಕ ಮೇಳಕ್ಕೆ ತುಂಬಾ ವ್ಯತ್ಯಾಸವಿದೆ. ಬಯಲಾಟದ ಮೇಳಗಳು ಸಾಮಾನ್ಯವಾಗಿ ದೀಪಾವಳಿ ಅಮಾವಾಸ್ಯೆಯಂದು ತಿರುಗಾಟ ಆರಂಭಿಸಿ, ಪತ್ತನಾಜೆಯಂದು ತನ್ನ ಆ ವರ್ಷದ ಕೊನೆಯ ತಿರುಗಾಟ ಮುಗಿಸುವುದು ವಾಡಿಕೆ. ಆದರೆ ಚಿಕ್ಕ ಮೇಳದ ತಿರುಗಾಟ ಇದಕ್ಕೆ ವ್ಯತಿರಿಕ್ತ. ಪತ್ತನಾಜೆಯ ನಂತರ ತಿರುಗಾಟ ಆರಂಭಿಸಿ, ದೀಪಾವಳಿ ಅಮವಾಸ್ಯೆಗೆ ತನ್ನ ಕೊನೆಯ ಪ್ರದರ್ಶನ ನೀಡುವುದು. ತೆಂಕು–ಬಡಗು ಎರಡೂ ತಿಟ್ಟುಗಳಲ್ಲೂ ಚಿಕ್ಕಮೇಳಗಳಿವೆ.



"ಚಿಕ್ಕ ಮೇಳ" ಎಂಬ ಹೆಸರೇ ಹೇಳುವಂತೆ ಇದು ಬಯಲಾಟದ ಮೇಳಕ್ಕಿಂತಲೂ ಚಿಕ್ಕದಾದ ಸ್ವರೂಪ ಹೊಂದಿದೆ. ಭಾಗವತರು, ಓರ್ವ ಮದ್ದಳೆಗಾರ, ಒಬ್ಬ ಪುರುಷ ವೇಷ, ಒಬ್ಬ ಸ್ತ್ರೀವೇಷ, ಗ್ಯಾಸ್ ಲೈಟ್ ಹಿಡಿಯುವವ ಹಾಗೂ ಮನೆಗಳ ದಾರಿ, ಮನೆಗಳ ಯಜಮಾನರ ಪರಿಚಯವುಳ್ಳ ಓರ್ವ ಮಾರ್ಗದರ್ಶಿ, ಓರ್ವ ಸಹಾಯಕ ಇಷ್ಟು ಜನರ ತಂಡವೇ "ಚಿಕ್ಕಮೇಳ". ಇಲ್ಲಿ ಚೆಂಡೆಯ ಅಗತ್ಯವಿಲ್ಲ. ಪ್ರದರ್ಶನಕ್ಕೆ ಆಯ್ದುಕೊಳ್ಳುವುದು ಯಕ್ಷಗಾನ ಪ್ರಸಂಗಗಳಲ್ಲಿನ ಐದಾರು ಪದ್ಯಗಳ, ಸ್ತ್ರೀ–ಪುರುಷ ಸಂವಾದದ ಭಾಗಗಳನ್ನು. ಪ್ರಯಾಣಕ್ಕೆ ಗ್ಯಾಸ್ಲೈಟಿನ ಬೆಳಕು ಹಿಂದೆ ಬಳಕೆಯಲ್ಲಿದ್ದರೆ, ಇಂದು ಚಾರ್ಜರ್ಗಳಿವೆ. ಹಿಂದಿನ ಕಾಲದಲ್ಲಿ ನಡೆದೇ ಮನೆ ಮನೆಗೆ ಹೋಗುತ್ತಿದ್ದ ಚಿಕ್ಕ ಮೇಳಕ್ಕೆ ಈಗಿನ ಆಧುನಿಕ ಯುಗದಲ್ಲಿ ವಾಹನ ವ್ಯವಸ್ಥೆಯೂ ಇದೆ. ಕೆಲವೇ ಮಂದಿಗಳ ಮೇಳವಿದಾದುದರಿಂದ ಈ ಮೇಳಕ್ಕೆ 'ಚಿಕ್ಕಮೇಳ'ವೆಂಬ ಹೆಸರು ಅನ್ವರ್ಥವಾಗಿದ್ದರೆ, ಚಿಕ್ಕ ಚಿಕ್ಕ ಸಂವಾದಗಳನ್ನು ನಡೆಸುವ ಪ್ರಸಂಗಗಳನ್ನೆ ಆಯ್ದುಕೊಂಡಿರುವ ಕಾರಣಕ್ಕೂ ಇದು ಚಿಕ್ಕಮೇಳವೇ ಹೌದು. ಬಡಗುತಿಟ್ಟಿನ "ಹೂವಿನಕೋಲು" ಎಂಬ ಕಲಾಪ್ರಕಾರವೂ ಚಿಕ್ಕ ಮೇಳದ ಸ್ವರೂಪವನ್ನೇ ಹೊಂದಿದ್ದರೂ, ಇಲ್ಲಿ ವೇಷ ಇರುವುದಿಲ್ಲ, ಕೇವಲ ತಾಳಮದ್ದಳೆ ರೂಪದ ಸಂಭಾಷಣೆ ಮಾತ್ರ. ಉತ್ತರಕನ್ನಡದ ಹೊನ್ನಾವರ ಭಾಗದಲ್ಲಿ 'ಸುಗ್ಗಿಮೇಳ'ವೆಂದು ಈ ಚಿಕ್ಕಮೇಳವನ್ನು ಕರೆಯುತ್ತಾರೆ.

ಚಿಕ್ಕಮೇಳದ ತಿರುಗಾಟಕ್ಕೆ ಧಾರ್ಮಿಕ ಉದ್ದೇಶವನ್ನೂ ಕಾಣಬಹುದು. ಯಕ್ಷಗಾನ ಮೇಳಗಳು ಸಾಮಾನ್ಯವಾಗಿ ದೇವಸ್ಥಾನದ ಹೆಸರಿನಿಂದಲೇ ತಿರುಗಾಟ ನಡೆಸುವುದು. ಮೇಳವು ತನ್ನ ಕೊನೆಯ ಸೇವೆಯಾಟ ಮುಗಿಸಿ, ದೇವರು "ಒಳಗೆ ಹೋಗುವ" ಕ್ರಮವಿದೆ. ನಂತರದ ಕೆಲವು ದಿನಗಳಲ್ಲಿ ಆಯಾಯ ದೇವಸ್ಥಾನದ ದೇವರುಗಳು ಚಾತುರ್ಮಾಸ ವ್ರತದಲ್ಲಿರುತ್ತದೆ. ಈ ಅವಧಿಯಲ್ಲಿ ಉತ್ಸವ, ವಿಶೇಷ ಪೂಜೆಗಳೂ ಇರುವುದಿಲ್ಲ. ದೇವರು ಶಯನದಲ್ಲಿರುತ್ತಾರೆ ಎಂಬುದು ಧಾರ್ಮಿಕ ಭಾವನೆ. ಈ ಸಂದರ್ಭದಲ್ಲಿ, ದೇವರು ಶಯನದಲ್ಲಿರುವ ಕಾರಣ, ದುಷ್ಟ ಶಕ್ತಿಗಳು ತಮ್ಮ ಪ್ರಾಬಲ್ಯ ಗಳಿಸುತ್ತವೆ. ಚಿಕ್ಕಮೇಳವು ಮನೆ ಮನೆಗೆ ಹೋಗಿ ಚಿಕ್ಕ ಮೇಳದ ದೇವರ ಪ್ರಸಾದ ಹಿಡಿದು, ತಾಳ, ಮದ್ದಲೆ ನುಡಿಸಿದಾಗ, ಗೆಜ್ಜೆಯ ನಿನಾದ ಅನುರಣಿಸಿದಾಗ ದುಷ್ಟ ಶಕ್ತಿಗಳ ಪ್ರಭಾವ ಕುಂಠಿತವಾಗಿ ಮನೆಯ ಸುತ್ತಲೂ ದೈವಿಕ ಶಕ್ತಿ ಸಂಚರಿಸುತ್ತದೆ ಎಂಬ ನಂಬಿಕೆಯೇ ಚಿಕ್ಕ ಮೇಳದ ಉಗಮಕ್ಕೆ ಕಾರಣ ಎನ್ನಬಹುದು. ಚಿಕ್ಕಮೇಳ ಮನೆಗೆ ಬಂದರೆ, ಆ ಮೇಳ ಹೊರಡುವ ದೇವಸ್ಥಾನದ ದೇವರೇ ಮನೆಗೆ ಬಂದಂತೆ ಎಂಬ ನಂಬಿಕೆ ಜನರದ್ದು. ಆದರೆ, ಆರ್ಥಿಕ ದೃಷ್ಟಿಯಿಂದ ನೋಡಿದರೆ, ಈ ಚಿಕ್ಕ ಮೇಳದ ಉದ್ದೇಶ ಮಳೆಗಾಲದಲ್ಲಿ ಯಾವುದೇ ವರಮಾನವಿಲ್ಲದ ಕಲಾವಿದರ ಹೊಟ್ಟೆಪಾಡಿಗೆ ಕಂಡುಕೊಂಡ ಪರ್ಯಾಯ ವ್ಯವಸ್ಥೆ. "ಮಳೆಗಾಲದಲ್ಲಿ ಜೀವನೋಪಾಯಕ್ಕಾಗಿ ವೇಷ ಕಟ್ಟಿ ಮನೆಮನೆಗೆ ಹೋಗಿ ಮನೆಯವರು ನೀಡಿದ ಧನವೋ, ಆಹಾರವೋ ತಮಗೆ ಅನುಕೂಲವಾಗುವಂತೆ ಈ ಚಿಕ್ಕಮೇಳದ ಹುಟ್ಟಿಗೆ ಕಾರಣವೆಂದು ಈಗಿನ ಸುಪ್ರಸಿದ್ಧ ಹಾಗೂ ಹಿರಿಯ ಯಕ್ಷಗಾನ ಕಲಾವಿದ ಕೆ.ಗೋವಿಂದ ಭಟ್ ಅವರು ತಮ್ಮ "ಎಪ್ಪತ್ತು ತಿರುಗಾಟಗಳು" ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಹಿರಿಯ ಕಲಾವಿದರನೇಕರ ಅಭಿಪ್ರಾಯವೂ ಇದೇ ಆಗಿದೆ. ಯಾವುದೇ ವರಮಾನದ ಮೂಲವಿಲ್ಲದ, ದುಡಿಯುವುದಕ್ಕೊಂದು ಸೂಕ್ತ ಕೆಲಸವೂ ಸಿಗಲಾರದ ಕಲಾವಿದರು ತಮ್ಮ ಹಸಿವಿನ ಬೇಗೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಕಂಡುಕೊಂಡ ಜೀವನೋಪಾಯವೇ ಈ "ಚಿಕ್ಕಮೇಳ" ಎನ್ನಬಹುದು. ಇಂದು ಚಿಕ್ಕಮೇಳಕ್ಕೆ ಯಕ್ಷಗಾನ ಅಭಿಮಾನಿಗಳ ಪ್ರೋತ್ಸಾಹವೂ ದೊರಕಿದೆ. ಸಂಪಾದನೆಗೂ ಮೂಲವಾಗಿದೆ. ಇಂದಿನ "ಚಿಕ್ಕಮೇಳ"ದ ಕಲಾವಿದರ ಆದಾಯವೂ ತೃಪ್ತಿಕರವಾಗಿದೆ, ಗೌರವವೂ ಇದೆ. "ಚಿಕ್ಕಮೇಳದ ಕಲಾವಿದರ ಪರಿಶ್ರಮ ಸುಲಭದ್ದೇನಲ್ಲ. ಯಾವುದಾದರೊಂದು ಊರಿನಲ್ಲಿ ಚಿಕ್ಕಮೇಳದ ತಂಡ ಬಿಡಾರ ಹೂಡುತ್ತಾರೆ. ದೇವಾಲಯ, ಕಲಾಪೋಷಕರು ನೀಡುವ ಉಚಿತ ಮನೆ ಇದೇ ಚಿಕ್ಕಮೇಳದ ವಸತಿ ವ್ಯವಸ್ಥೆ. ಸಂಜೆಯಾಗುತ್ತಲೇ ಸ್ತ್ರೀ–ಪುರುಷ ವೇಷಗಳು ತಯಾರಾಗುತ್ತಾರೆ. ಸೂರ್ಯಾಸ್ತಮಾನದ ನಂತರ ಬಿಡಾರ ಹೂಡಿದ ಸ್ಥಳದಲ್ಲಿ ಸ್ತುತಿಪದ್ಯ ಹಾಡಿ, ಸಂವಾದ ಆಡಿ, ಸುತ್ತಮುತ್ತಲಿನ ಮನೆಮನೆಗೆ ಪ್ರಯಾಣ.

ಹಿಂದೆ ಕಾಲ್ನಡಿಗೆಯಲ್ಲೇ ಸಾಗುತ್ತಿದ್ದ ಪ್ರಯಾಣಕ್ಕೆ ಇಂದು ವಾಹನ ವ್ಯವಸ್ಥೆಗಳಿವೆ. ಒಂದೊಂದು ದಿನ ಒಂದೊಂದು ಕಡೆ ತಿರುಗಾಟ. ಹಿಂದಿನ ಕಾಲದಲ್ಲಿ ಯಾವುದೇ ಪೂರ್ವಸೂಚನೆಯಿಲ್ಲದೆ ಮನೆಮನೆಗೆ ಹೋಗುತ್ತಿದ್ದ ಚಿಕ್ಕಮೇಳ ಇಂದು, ಎರಡು ದಿನಗಳ ಮೊದಲೇ ಮನೆಯವರನ್ನು ಸಂಪರ್ಕಿಸಿ ಪ್ರದರ್ಶನ ನೀಡುತ್ತಾರೆ. ಹಿಂದಿನ ಕಾಲದಲ್ಲಿ, ಮನೆಯವರ ಅನಾದರಕ್ಕೆ ಒಳಪಡುತ್ತಿದ್ದುದೂ ಇದೆ. ಸುರಿಯುವ ಮಳೆಯಲ್ಲಿ ಅಂಗಳದಲ್ಲೇ ಕುಣಿದು, ಅವರು ಕೊಟ್ಟದ್ದನ್ನು ಸ್ವೀಕರಿಸಿ ಮುಂದೆ ಸಾಗಿದ್ದೂ ಇದೆ. ಆದರೆ ಈಗ ಅಭಿಮಾನಿಗಳ ಪ್ರೋತ್ಸಾಹವೂ ದೊರಕುತ್ತಿದೆ. ಹೆಚ್ಚಾಗಿ ಹಳ್ಳಿಗಳಲ್ಲೇ ತಿರುಗಾಟ ಮಾಡುತ್ತಿದ್ದ "ಚಿಕ್ಕಮೇಳ" ಹೊತ್ತು ಮುಳುಗುವಾಗ ಹೊರಟರೆ ಬಿಡಾರ ಸೇರುವುದು ಗುಡ್ಡೆಯ ಮುಳ್ಳು, ಬೈಲು, ಹಾಡಿ, ಗದ್ದೆಯ ಬದಿ ಇವನ್ನೆಲ್ಲ ದಾಟಿದಾಗ ಮಧ್ಯ ರಾತ್ರಿಯೇ ಆಗುತ್ತಿತ್ತು. ಕೆಲವು ಮನೆಗಳಲ್ಲಿ ಚಿಕ್ಕ ಮೇಳದ ಕಲಾವಿರಿಗೆ, ಯಕ್ಷಗಾನ ಅಭಿಮಾನಿಗಳು ಉಪಾಹಾರ ನೀಡುವುದೂ ಇದೆ. ಹಲವು ಮನೆಗಳಲ್ಲಿ ತಿರಸ್ಕಾರ, ಅನಾದರ ಅನುಭವಿಸಿದ್ದೂ ಇದೆ. ಏನಿದ್ದರೂ ಮಾನ ಅಪಮಾನ ಸಮಾನ ಮನಸ್ಥಿತಿಯಿಂದ ಸ್ವೀಕರಿಸಿದ್ದುದೂ ಇದೆ. ಅಂದಿನ ದಿನದ ತಿರುಗಾಟ ಮುಗಿಸಿ, ವೇಷ ಕಳಚಿ ಕಳೆದ ಸಂಜೆ ಮಾಡಿಟ್ಟ ಅಡುಗೆಯನ್ನೇ ಊಟ ಮಾಡು ಕ್ರಮ ಚಿಕ್ಕ ಮೇಳದ ಕಲಾವಿದರದ್ದು. ಅನಂತರ ನಿದ್ರೆ. ಮರುದಿನದ ದೈನಂದಿನ ಚಟುವಟಿಕೆಯ ನಂತರ ಯಥಾಪ್ರಕಾರ.



ಚಿಕ್ಕಮೇಳದಲ್ಲಿ ದುಡಿದ ಕಲಾವಿದರ ದೊಡ್ಡ ಪರಂಪರೆಯೇ ಇದೆ. ಮೇಳಗಳಲ್ಲಿ ಹೆಸರು ಪಡೆದ ಹೆಚ್ಚಿನ ಕಲಾವಿದರು ಚಿಕ್ಕಮೇಳದ ತಿರುಗಾಟವನ್ನು ಮಾಡಿದವರೇ. ಕುಂಬ್ಳೆ ಸುಂದರ ರಾವ್, ಕೆ.ಗೋವಿಂದ ಭಟ್, ಬಣ್ಣದ ಕುಟ್ಯಪ್ಪು, ಪುತ್ತೂರು ಶೀನ ಭಂಡಾರಿ, ಕಿರಿಯ ಬಲಿಪ ನಾರಾಯಣ ಭಾಗವತರು, ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟಿ, ತಾರಾನಾಥ ವರ್ಕಾಡಿ, ಶಶಿಕಾಂತ ಶೆಟ್ಟಿ, ಬಾಲಕೃಷ್ಣ ಮಣಿಯಾಣಿ, ಸಂಪಿಗೆ ಸುರೇಂದ್ರ ಪೈ, ಪ್ರಫುಲ್ಲಚಂದ್ರ ನೆಲ್ಯಾಡಿ, ಆನಂದ ಪುರುಷ, ಅಡೂರು ಜಯರಾಮ ಮೊದಲಾದ ಕಲಾವಿದರು ಚಿಕ್ಕಮೇಳದಲ್ಲಿ ತಿರುಗಾಟ ನಡೆಸಿದವರೇ ಆಗಿದ್ದಾರೆ. ಕುಂಬ್ಳೆ ಸುಂದರ ರಾಯರು ಮೊದಲು ಚಿಕ್ಕಮೇಳದ ಕಲಾವಿದರಾಗಿ ಅನಂತರ ಕೂಡ್ಲುಮೇಳ ಸೇರಿ ಮಹಾನ್ ಮಾತುಗಾರರಾಗಿ ಬೆಳೆದವರು. ಸುಪ್ರಸಿದ್ಧ ಬಣ್ಣದ ಕಲಾವಿದ, ಕಟೀಲು ಮೇಳದಲ್ಲಿ, ಮಹಿಷಾಸುರ ಪಾತ್ರಕ್ಕೆ ತನ್ನದೇ ಆದ ಚಿತ್ರಣ ನೀಡಿದ ಕುಂಬ್ಳೆ ಕುಟ್ಯಪ್ಪರವರು ತಮ್ಮದೇ ಆದ ಚಿಕ್ಕಮೇಳದ ತಿರುಗಾಟ ಆರಂಭಿಸಿದ ಉಲ್ಲೇಖವಿದೆ. ಪ್ರಾರಂಭದಲ್ಲಿ ಸೀಮಿತ ಜಾತಿಯ ಕಲಾವಿದರು ಮಾತ್ರ ಚಿಕ್ಕಮೇಳದಲ್ಲಿದ್ದವರು. ಆದರೆ, ಹಸಿವೆಗೆ ಜಾತಿಯ ಭೇದ ಇಲ್ಲವಲ್ಲ? ಕಾಲಕ್ರಮೇಣ ಎಲ್ಲ ಜಾತಿಯವರೂ ಚಿಕ್ಕಮೇಳದಲ್ಲಿ ಸೇರಿಕೊಂಡರು. ಬಡಗಿನಲ್ಲಿ "ಹೂವಿನಕೋಲು" ಎಂಬ ಚಿಕ್ಕ ಮೇಳದ ಸ್ವರೂಪದಲ್ಲಿ ಸುಪ್ರಸಿದ್ಧರಾದ ಕುಂಜಾಲು ಶೇಷಗಿರಿ ಕಿಣಿ, ಗಣಪತಿ ಪ್ರಭುಗಳಂತಹ ಕಲಾವಿದರು" ಹೂವಿನಕೋಲು" ಹಿಡಿದುಕೊಂಡು ಮನೆಮನೆ ತಿರುಗಾಟ ಮಾಡಿದವರೇ ಆಗಿದ್ದಾರೆ.



**ಈ**ಗಿನ ಕಾಲಘಟ್ಟದಲ್ಲಿ ಚಿಕ್ಕಮೇಳದ ಆಡಳಿತ ವ್ಯವಸ್ಥೆಯ ಬಗ್ಗೆ ಎರಡು ವಿಧಗಳಿವೆ. ಒಂದು, ನಿಗದಿತ ದೇವಸ್ಥಾನದ ನಿಯಂತ್ರಣಗೊಳಪಟ್ಟು ದೇವಳದ ವತಿಯಿಂದಲೇ ತಿರುಗಾಟ ನಡೆಸುವಂತಹುದು. ಉದಾಹರಣೆಗೆ ಮೂಡುಬಿದಿರೆ ಪುತ್ತಿಗೆಯ ಚಿಕ್ಕಮೇಳ ಹಾಗೂ ಇಂತಹ ಅನೇಕ ಇನ್ನಿತರ ಮೇಳಗಳು. ಎರಡನೆಯದು, ಯಾರಾದರೊಬ್ಬರು ದೇವಸ್ಥಾನದ ಆಡಳಿತ ಮಂಡಳಿಯ ಒಪ್ಪಿಗೆಯಿಂದ ಆ ದೇವಸ್ಥಾನದ ಹೆಸರಿನಲ್ಲಿ ಚಿಕ್ಕಮೇಳ ಹೊರಡಿಸುವುದು. ತಮಗೆ ದೊರಕುವ ಆದಾಯದ ಸಣ್ಣ ಅಂಶವನ್ನು ಆಯಾಯ ದೇವಸ್ಥಾನಕ್ಕೆ ಸಲ್ಲಿಸಿ, ಉಳಿದ ಗಳಿಕೆಯನ್ನು ಕಲಾವಿದರೇ ಹಂಚುವುದು. ಇಂತಹ ಚಿಕ್ಕಮೇಳಗಳು ತುಂಬಾ ಇವೆ. ಎರಡನೇ ವಿಧದ ಚಿಕ್ಕಮೇಳಗಳ ವ್ಯವಸ್ಥಾಪಕರು ಯಕ್ಷಗಾನ ಕಲಾವಿದರೇ ಆಗಿರುತ್ತಾರೆ. ಒಂದು ಅಂದಾಜಿನ ಪ್ರಕಾರ ಇಂದು 60ಕ್ಕೂ ಹೆಚ್ಚು ಚಿಕ್ಕಮೇಳಗಳು ಕರಾವಳಿಯಾದ್ಯಂತ ತಿರುಗಾಟ ನಡೆಸುತ್ತಿವೆ. ಇತ್ತೀಚೆಗೆ ಚಿಕ್ಕಮೇಳಗಳ ಬಗ್ಗೆ ಅಪಸ್ವರ, ಕಟು ವಿಮರ್ಶೆಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಪ್ರಚಾರವಾಗುತ್ತಿದೆ. ಚಿಕ್ಕಮೇಳದವರು, ಮನೆಯವರಿಗೆ ದೇವರ ಹೆಸರು ಹೇಳಿ ಇಂತಿಷ್ಟು ಕೊಡಲೇಬೇಕು, ಅಕ್ಕಿ, ತೆಂಗಿನಕಾಯಿ ನೀಡಬೇಕು ಎಂಬ ಆದೇಶ, ಬೆದರಿಕೆ ಹಾಕುತ್ತಿದ್ದಾರೆ, ಕುಡಿದು ಮನೆ ಮನೆಗಳಿಗೆ ಹೋಗುತ್ತಾರೆ ಎಂಬ ಅಪವಾದವಿದೆ. ಈ ರೀತಿ ಮಾಡುತ್ತಿರುವವರು ಒಂದೆರಡು ಚಿಕ್ಕಮೇಳಗಳಿರಬಹುದು. ಆದರೆ, ಜನ ಸಾಮಾನ್ಯರಿಗೆ, ಎಲ್ಲಾ ಚಿಕ್ಕಮೇಳಗಳು ಇದೇ ರೀತಿ ಎಂಬ ಅಭಿಪ್ರಾಯ ಮೂಡುತ್ತಿದೆ. ಎಲ್ಲಾ ಚಿಕ್ಕಮೇಳದ ವ್ಯವಸ್ಥಾಕರು ಈ ಬಗ್ಗೆ ಕಠಿಣವಾಗಿ ನಿರ್ಧಾರ ಕೈಗೊಂಡರೆ, ಚಿಕ್ಕಮೇಳಗಳ ಬಗ್ಗೆ ಸಾರ್ವಜನಿಕರಿಗೆ ಸದಭಿಪ್ರಾಯ ಮೂಡಬಹುದು. ಈ ನಿಟ್ಟಿನಲ್ಲಿ ಎಲ್ಲಾ ಚಿಕ್ಕಮೇಳಗಳ ವ್ಯವಸ್ಥಾಪಕರು ಯೋಚಿಸಬೇಕು. ಈ ಬಗ್ಗೆ ಇತ್ತೀಚೆಗೆ ಬಂಟ್ವಾಳದಲ್ಲಿ ಸುಪ್ರಸಿದ್ಧ ಕಲಾವಿದರಾದ ಸರಪಾಡಿ ಅಶೋಕ ಶೆಟ್ಟಿಯವರ ನೇತೃತ್ವದಲ್ಲಿ ಸಭೆಯೂ ನಡೆದಿದೆ. ಆ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಚಿಕ್ಕಮೇಳಗಳ ವ್ಯವಸ್ಥಾಪಕರು ಚಿಂತಿಸಬೇಕು. ಇಲ್ಲದಿದ್ದರೆ, ಚಿಕ್ಕಮೇಳಗಳಿಗೆ ಅಭಿಮಾನಿಗಳು ತಮ್ಮ ಪ್ರೋತ್ಸಾಹವನ್ನು ನಿಲ್ಲಿಸುವ ಅಪಾಯವೂ ಇದೆ.

***ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

# ನಡುತಿಟ್ಟಿನ ಗತ್ತು ಗೈರತ್ತಿನ ಕಲಾವಿದ – ಬೆದ್ರಾಡಿ ನರಸಿಂಹ ನಾಯ್ಕ್






ಬೆದ್ರಾಡಿ ನರಸಿಂಹ ನಾಯ್ಕರು

ಬಡಗುತಿಟ್ಟಿನ ಒಂದು ಪ್ರಬೇದವಾದ ಬ್ರಹ್ಮಾವರ–ಕುಂದಾಪುರ ಆಸುಪಾಸಿನ ನಡುತಿಟ್ಟಿನ ಅಗ್ರ ಪಂಕ್ತಿಯ ಕಲಾವಿದರಲ್ಲಿ ಒಬ್ಬರಾದ ಸಮರ್ಥ ಎರಡನೇ ವೇಷಧಾರಿಯಾಗಿ ಗುರುತಿಸಲ್ಪಡುವ ಸದ್ಯ ಶ್ರೀ ಮಂದಾರ್ತಿ ಮೇಳದ ಪ್ರಧಾನ ಕಲಾವಿದ ಬೆದ್ರಾಡಿ ನರಸಿಂಹ ನಾಯ್ಕರು ಸಿದ್ದಿಯ ನೆಲೆಯಲ್ಲಿ ಗುರುತಿಸಲ್ಪಡುವ ಸಮರ್ಥ ಎರಡನೇ ವೇಷಧಾರಿ. ದೀರ್ಘಕಾಲ ಸೌಕೂರು ಮೇಳದಲ್ಲಿ ಒತ್ತು ಎರಡನೇ ವೇಷದಾರಿಯಾಗಿ ಸೇವೆ ಸಲ್ಲಿಸಿದ ಇವರು ಕಳೆದ ಕೆಲವು ವರ್ಷಗಳಿಂದ ಶ್ರೀ ಮಂದಾರ್ತಿ ಮೇಳದಲ್ಲಿ ಎರಡನೇ ವೇಷದ ಸ್ಥಾನಕ್ಕೆ ಏರಿದವರು.

ಕುಂದಾಪುರ ತಾಲೂಕು ಮೊಳಹಳ್ಳಿ ಗ್ರಾಮದಲ್ಲಿ ಸಂಕಮ್ಮ ಹಾಗೂ ರಾಮ ನಾಯ್ಕ ದಂಪತಿಗಳ ಪುತ್ರನಾಗಿ ಬಡ ಮೊಗವೀರ ಕುಟುಂಬದಲ್ಲಿ ಜನಿಸಿದ ಇವರು ನಾಲ್ಕನೇ ತರಗತಿ ಮುಗಿಸಿ ಸುತ್ತ ಮುತ್ತ ನಡೆಯುತಿದ್ದ ಮಂದಾರ್ತಿ, ಮಾರಣಕಟ್ಟೆ ಮೇಳಗಳ ಆಟದಿಂದ ಆಕರ್ಷಿತರಾಗಿ ಯಕ್ಷಗಾನದತ್ತ ಮುಖ ಮಾಡಿದರು. ಹಿರಿಯ ಕಲಾವಿದರಾದ ಹಾರಾಡಿ ಸರ್ವೋತ್ತಮ ಗಾಣಿಗ ಮತ್ತು ಆಲೂರು ತೇಜ ನಾಯ್ಕರಿಂದ ಯಕ್ಷಗಾನ ಅಭ್ಯಾಸಮಾಡಿ ಶ್ರೀ ಮಂದಾರ್ತಿ ಮೇಳದಲ್ಲಿ ಬಾಲಗೋಪಾಲರಾಗಿ ಗೆಜ್ಜೆ ಕಟ್ಟಿದರು. ಕೋಡಂಗಿ ಬಾಲಗೋಪಾಲ ಒಡ್ಡೋಲಗ ಹೀಗೆ ಹಂತ ಹಂತವಾಗಿ ಮೇಲೇರಿದ ಇವರು ಮೊದಲು ಮಾಡಿದ ಪ್ರಸಂಗದ ವೇಷ ಅಭಿಮನ್ಯು ಕಾಳಗದ ದುಶ್ಯಾಸನ. ಮೊಳಹಳ್ಳಿ ಹೆರಿಯ ನಾಯ್ಕರಿಂದ ಮಾತುಗಾರಿಕೆ ಪ್ರಸಂಗ ನಡೆ ಅಭ್ಯಾಸ ಮಾಡಿದ ಇವರು ಬಳಿಕ ಹಾಲಾಡಿ. ಗೋಳಿಗರಡಿ ಮುಂತಾದ ಮೇಳಗಳಲ್ಲಿ ಸೇವೆ ಸಲ್ಲಿಸಿದರು. ಸುದೀರ್ಘ 13 ವರ್ಷ ಸೌಕೂರು ಮೇಳದಲ್ಲಿ ಒತ್ತು ಎರಡನೇ ವೇಷಧಾರಿಯಾಗಿ ಸೇವೆ ಸಲ್ಲಿಸಿದ ಇವರು ಅಲ್ಲಿ ಕೀಚಕ, ಕಾರ್ತವೀರ್ಯ, ಕಾಲನೇಮಿ ಮದು ಕೈಟಭ ಮುಂತಾದ ವೇಷಗಳಿಂದ ಜನಮನ್ನಣೆ ಪಡೆದರು. ಅನೇಕ ಸಂಪ್ರದಾಯದ ಕಲಾವಿದರಿದ್ದ ಸೌಕೂರು ಮೇಳದಲ್ಲಿ ಕೋಡಿ ವಿಶ್ವನಾಥ ಗಾಣಿಗರ ಕರ್ಣನಿಗೆ ಇವರ ಅರ್ಜುನ ಶಲ್ಯ ಮುಂತಾದ ವೇಷಗಳು ಸಂಪ್ರದಾಯಪ್ರಿಯರನ್ನು ರಂಜಿಸಿದ್ದವು, ಹಾರಾಡಿ ಶೈಲಿಯ ಕಟ್ಟುಮೀಶೆಯ ಇವರ ವೇಷಗಳು ಪೌರಾಣಿಕ ಪ್ರಸಂಗಗಳಿಗೆ ಹೊಸ ಕಳೆಯನ್ನು ನೀಡುತಿದ್ದವು. ಹಿರಿಯ ಕಲಾವಿದರಾದ ಕೋಡಿ ಶಂಕರ ಗಾಣಿಗ, ಅರಾಟೆ ಮಂಜುನಾಥ. ನರಾಡಿ ಭೋಜರಾಜ ಶೆಟ್ಟಿ, ಆಜ್ರಿ ಗೋಪಾಲ ಗಾಣಿಗ, ಕೋಡಿ ವಿಶ್ವನಾಥ ಗಾಣಿಗ, ಕೋಟ ಸುರೇಶ ಭಂಗೇರ, ಐರ್ ಬೈಲ್ ಆನಂದ ಶೆಟ್ಟಿ, ಬೆಲ್ತೂರು ರಮೇಶ ಮುಂತಾದವರ ಯಕ್ಷಗಾನದ ಆದರ್ಶಗಳನ್ನು ಮೈಗೂಡಿಸಿಕೊಂಡ ಇವರು ಕಳೆದ 10 ವರ್ಷಗಳಿಂದ ಮಂದಾರ್ತಿ ಮೇಳದ ಎರಡನೇ ವೇಷಧಾರಿಯಾಗಿ ಶ್ರೀ ಮಂದಾರ್ತಿ ಕ್ಷೇತ್ರ ಮಹಾತ್ಮೆಯ ದೇವವರ್ಮ, ಮಹಿಷಾಖ್ಯ, ದೇವಿ ಮಹಾತ್ಮೆಯ ಶುಂಬಾಸುರ, ಮಹಿಷಾಸುರ, ಕೀಚಕ ಭಸ್ಮಾಸುರ, ಘಟೋತ್ಕಜ, ಕಂಸ ಮುಂತಾದ ಖಳ ಪಾತ್ರವಲ್ಲದೇ ಸುದನ್ವ, ತಾಮ್ರದ್ವಜ, ಬಲರಾಮ ವಲಲ ಮುಂತಾದ ವೇಷಗಳಿಗೆ ಜೀವ ತುಂಬಿದ್ದಾರೆ. ಅತ್ಯುತ್ತಮ ಪಾತ್ರ ಚಿತ್ರಣ ಸದ್ರಡವಾದ ಆಳಂಗ ತೂಕದ ರಸಾತ್ಮಕ ಮಾತುಗಾರಿಕೆ, ಖಚಿತವಾದ ಲಯಗಾರಿಕೆ, ಶ್ರುತಿಬದ್ಧ ಏರುಕಂಠವನ್ನು ಗುರುತಿಸಬಹುದಾದ ಇವರ ವೇಷಗಳಲ್ಲಿ ಪರಂಪರೆಯ ನಡೆಯನ್ನು ಗುರುತಿಸಬಹುದಾಗಿದೆ. ಪೌರಾಣಿಕ ಪ್ರಸಂಗದ ಯಾವುದೇ ಗಂಡು ಪಾತ್ರಗಳಿಗೆ ನ್ಯಾಯ ಒದಗಿಸಿದ ಇವರ ನಾಯಕ–ಪ್ರತಿನಾಯಕ ಪಾತ್ರಗಳೆರಡೂ ಕೂಡ ಕಡೆದು ನಿಲ್ಲಿಸಿದ ಸ್ಪಟಿಕದ ಬಿಂಬದಂತೆ ಸಂಪ್ರದಾಯಬದ್ಧ ಯಾವುದೇ ಪ್ರಸಂಗದ ಅರ್ಜುನನ ವೇಷ ಇವರಿಗೆ ಕೀರ್ತಿ ತಂದಿತ್ತ ಪಾತ್ರ. ಹೆರಂಜಾಲು ಗೋಪಾಲ ಗಾಣಿಗ, ಕೆ.ಪಿ.ಹೆಗಡೆ, ನಗರ ಸುಬ್ರಮಣ್ಯ ಅಚಾರ್ ಮುಂತಾದ ಸಮರ್ಥ ಬಾಗವತರೊಂದಿಗೆ ಪಳಗಿದ ಇವರಿಗೆ ಕುಂದಾಪುರ ತಾಲೂಕಿನಾದ್ಯಂತ ಬಂಟರ ಸಂಘ, ಮೊಗವೀರ ಸಂಘದ ಸನ್ಮಾನದ ಸಹಿತ ಅನೇಕ ಸನ್ಮಾನಗಳು ಸಂದಿವೆ. ಮಡದಿ ಸರೋಜ ನಾಲ್ವರು ಮಕ್ಕಳ ಸಹಿತ ಬೆದ್ರಾಡಿಯಲ್ಲಿ ನೆಲೆಸಿರುವ ಇವರು ಸತತ 38 ವರ್ಷದ ಯಕ್ಷ ತಿರುಗಾಟದಲ್ಲಿದ್ದಾರೆ.



ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ


***ಲೇಖಕರು – ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ.***

# ಕದ್ರಿ ಮೇಳದ ಗತ ವೈಭವ–ಮೇಳ ದರ್ಪಣ ಸಂಚಿಕೆ–04

ಕದ್ರಿ ಶ್ರೀ ಮಂಜುನಾಥೇಶ್ವರ ಮೇಳವು ತೆಂಕುತಿಟ್ಟಿನ ಪುರಾತನ ಮೇಳಗಳಲ್ಲೊಂದು. ಕದ್ರಿ ಮೇಳಕ್ಕೆ 150 ವರ್ಷಗಳಿಗೂ ಅಧಿಕ ಇತಿಹಾಸವಿದೆ. ಸುಮಾರು 1920ರಲ್ಲಿ ಕದ್ರಿ ಮೇಳವು ಕೊಡಿಯಾಲಗುತ್ತು ಹಿರಿಯ ಹೆಗಡೆ – ಶಂಭು ಹೆಗಡೆಯವರ ಯಾಜಮಾನ್ಯದಲ್ಲಿ ಯಶಸ್ವಿಯಾಗಿ ದೀರ್ಘ ಕಾಲ ತಿರುಗಾಟ ನಡೆಸಿತ್ತು. ಅಳಿಕೆ ಮೋನಪ್ಪ ರೈ, ಅವರ ಸುಪುತ್ರ ಅಳಿಕೆ ರಾಮಯ್ಯ ರೈ, ಪೈವಳಿಕೆ ಐತಪ್ಪ ಶೆಟ್ಟಿ, ಕೋಲುಳಿ ಸುಬ್ಬ, ಕುಂಬ್ಳೆ ಸುಬ್ಬರಂತಹ ಮಹಾನ್ ಕಲಾವಿದರು ಆ ಕಾಲದಲ್ಲಿ ಕದ್ರಿ ಮೇಳದಲ್ಲಿ ತಿರುಗಾಟ ನಡೆಸಿದ್ದರು. ಕದ್ರಿ ಮೇಳದ ಉಸ್ತುವಾರಿ ಶಂಭು ಹೆಗಡೆಯವರದ್ದೇ ಆಗಿತ್ತು. ಆ ಕಾಲದಲ್ಲಿ ಜೋಡಾಟಗಳಲ್ಲಿ ಕದ್ರಿ ಮೇಳವು ಪ್ರಸಿದ್ಧಿ ಹೊಂದಿ ಹಲವಾರು ಬಹುಮಾನಗಳನ್ನೂ ಗೆದ್ದಿತ್ತು. "ಜೋಡಾಟದ ಪ್ರಚಂಡ" ಅಳಿಕೆ ರಾಮಯ್ಯ ರೈಗಳಿಗೆ, ಕದ್ರಿ **ಮೇಳದಲ್ಲಿ ಇರುವಾಗ ಜೋಡಾಟದಲ್ಲಿ ಹಲವಾರು ಚಿನ್ನದ ಪದಕ, ಹಾರ ದೊರಕಿತ್ತು. ಶಂಭು ಹೆಗ್ಗಡೆಯವರ ಯಾಜಮಾನ್ಯದಲ್ಲಿ ಅಳಿಕೆ ಮೋನಪ್ಪ ಶೆಟ್ಟರು,**

ಕದ್ರಿ ಮೇಳದಲ್ಲಿ ವ್ಯವಸ್ಥಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಸುಮಾರು 1950ರ ದಶಕದ ನಂತರ ಶಂಭು ಹೆಗಡೆಯವರ ಕದ್ರಿ ಮೇಳವು ತನ್ನ ತಿರುಗಾಟ ನಿಲ್ಲಿಸಿತು. ನಂತರದಲ್ಲಿ 1981ರಲ್ಲಿ ಯಕ್ಷಗಾನ ಕಲಾವಿದ ಹಾಗೂ ಸಮರ್ಥ ಸಂಘಟಕರಾದ ದಿ.ಕರ್ನೂರು ಕೊರಗಪ್ಪ ರೈಯವರು ಪುನಃ ಕದ್ರಿ ಶ್ರೀ ಮಂಜುನಾಥ ಸ್ವಾಮಿ ಕೃಪಾಶ್ರಿತ ಯಕ್ಷಗಾನ ಮಂಡಳಿ" ಹೆಸರಿನಲ್ಲಿ ಹೊಸ ಡೇರೆ ಮೇಳ ಹೊರಡಿಸಿದರು. ಕರ್ನೂರರ ಚಾಣಾಕ್ಷತೆ, ಸುಪ್ರಸಿದ್ಧ ಕಲಾವಿದರ ಗಡಣ, ಉತ್ತಮ ಕಥಾಹಂದರದ ತುಳು ಪ್ರಸಂಗಗಳ ಜೋಡಣೆಯೊಂದಿಗೆ, ಪೌರಾಣಿಕ ಪ್ರಸಂಗಗಳನ್ನೂ ಪ್ರದರ್ಶನ ನೀಡಿದ ಕಾರಣ, ಕದ್ರಿ ಮೇಳವು ಅಲ್ಪ ಕಾಲದಲ್ಲೇ ಪ್ರಸಿದ್ಧಿಯಾಯಿತು. ಪ್ರಥಮ ವರ್ಷದ ತಿರುಗಾಟದಲ್ಲಿ ಅತಿಥಿ ಕಲಾವಿದರಾಗಿ ಮುಂಬಯಿನ ಸುಪ್ರಸಿದ್ಧ ಭಾಗವತರಾದ ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ, ಕೇದಿಗೆ ರತ್ನಾಕರ್ ರಾವ್, ಕ್ರಿಶ್ಚಿಯನ್ ಬಾಬು, ಮೂಡುಬಿದಿರೆ ಮಾಧವ ಶೆಟ್ಟಿ, ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ, ಕೆ.ಎಚ್.ದಾಸಪ್ಪ ರೈ, ಕಾವೂರು ಕೇಶವ ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ, ಡಿ.ಮನೋಹರ್ ಕುಮಾರ್, ತಾರಾನಾಥ ವರ್ಕಾಡಿ, ಬೋಳಾರ ಸುಬ್ಬಯ್ಯ ಶೆಟ್ಟಿ, ಬಜಾಲ್ ಜನಾರ್ದನ ಮುಂತಾದ ಕಲಾವಿದರ ಗಡಣವೇ ಇತ್ತು. ಪ್ರಥಮ ತಿರುಗಾಟದಲ್ಲಿ ಉತ್ತಮ ಕಥಾಹಂದರದ "ಸತ್ಯದಪ್ಪೆ ಚೆನ್ನಮ್ಮ" ತುಳು ಪ್ರಸಂಗವು ಕದ್ರಿ ಮೇಳದಲ್ಲಿ ಜಯಭೇರಿ ಬಾರಿಸಿತು. ಮುಂದಿನ ತಿರುಗಾಟದಲ್ಲಿ ಇನ್ನಷ್ಟು ಪ್ರಸಿದ್ಧ ಕಲಾವಿದರ ಸೇರ್ಪಡೆಯಾಯಿತು. ಭಾಗವತರಾಗಿ ಪುತ್ತಿಗೆ ರಘುರಾಮ ಹೊಳ್ಳ, ಪೆರುವೊಡಿ ಶಾಮ ಭಟ್, ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟಿ, ಅಂಬಾಪ್ರಸಾದ್ ಪಾತಾಳ, ಬಂಟ್ವಾಳ ಜಯರಾಮ ಆಚಾರ್ಯ, ಸೀತಾರಾಮ ಕುಮಾರ್ ಕಟೀಲು, ಮುಂಡಾಜೆ ಸದಾಶಿವ ಶೆಟ್ಟಿ, ತೋಡಿಕಾನ ವಿಶ್ವನಾಥ ಗೌಡ, ಜೋಸೆಫ್ ಡಿಸೋಜಾ ನೆಲ್ಯಾಡಿ, ಅಪ್ಪುಕುಂಞ ಮಣಿಯಾಣಿ ಮುಂತಾದ ಕಲಾವಿದರ ಸಮಾಗಮದಲ್ಲಿ ಪ್ರದರ್ಶನ ನೀಡಿತು. ಈ ಅವಧಿಯಲ್ಲಿ ಡಿ.ಮನೋಹರ್ ಕುಮಾರ್ ವಿರಚಿತ "ಗೆಜ್ಜೆದ ಪೂಜೆ" ತುಳು ಪ್ರಸಂಗವು ಕದ್ರಿ ಮೇಳದಲ್ಲಿ ಪ್ರದರ್ಶನಗೊಂಡು ಯಕ್ಷರಂಗದಲ್ಲಿ ಹೊಸ ಸಂಚಲನ ಮೂಡಿಸಿತು. ಮಾಧವ ಶೆಟ್ಟರ ವಿಕ್ರಮವರ್ಮ, ಚೆನ್ನಪ್ಪ ಶೆಟ್ಟರ ಕೀರ್ತಿವರ್ಮ, ದಾಸಪ್ಪ ರೈಯವರ ಚಂದ್ರಸೇನ, ಮನೋಹರ್ ರ ನಾಗ, ಪಾತಾಳದವರ ತುಳಸಿ, ಜಯರಾಮ ಆಚಾರ್ಯರ ಮಾಯಿಲ, ಸೀತಾರಾಮರ ಕುಡುಕ ಕಾಳ ಪಾತ್ರಗಳು ರಂಗದಲ್ಲಿ ವಿಜ್ರಂಭಿಸಿದವು. ಕದ್ರಿ ಮೇಳದ ಗಲ್ಲಾ ಪೆಟ್ಟಿಗೆ ತಂಬಿಸಲು "ಗೆಜ್ಜೆದ ಪೂಜೆ" ದೊಡ್ಡ ಕಾಣಿಕೆ ನೀಡಿತು. ನಂತರದ ವರ್ಷದಲ್ಲಿ ಮೇಳಕ್ಕೆ ಸುಪ್ರಸಿದ್ಧ ಕಲಾವಿದರಾದ ಮಲ್ಪೆ ವಾಸುದೇವ ಸಾಮಗ, ಸರಪಾಡಿ ಅಶೋಕ ಶೆಟ್ಟಿ, ಬೊಟ್ಟಿಕೆರೆ ಪುರುಷೋತ್ತಮ ಶೆಟ್ಟಿಯವರ ಸೇರ್ಪಡೆಯಾಯಿತು. ಈ ಅವಧಿಯಲ್ಲಿ "ನಾಗದೃಷ್ಟಿ", "ಮದ್ರೆಂಗಿ ಮದ್ಮಲ್" "ಬೊಳ್ಳಿ ದಂಡಿಗೆ", "ಗರುಡ ಕೇಂಜವೆ" ಮುಂತಾದ ಪ್ರಸಂಗಗಳ ಪ್ರದರ್ಶನವಾಯಿತು. ಇದರೊಂದಿಗೆ ಪೌರಾಣಿಕ ಪ್ರಸಂಗಗಳಾದ "ಕದ್ರಿ ಕ್ಷೇತ್ರ ಮಹಾತ್ಮೆ" "ನಳಿನಾಕ್ಷ ನಂದನೆ" ಮುಂತಾದ ಪ್ರಸಂಗಗಳ ಪ್ರದರ್ಶನವೂ ಆಯಿತು.




ಕರ್ನೂರು ಕೊರಗಪ್ಪ ರೈಯವರು, 10 ವರ್ಷಗಳ ಕಾಲ ಕದ್ರಿ ಮೇಳದ ಯಶಸ್ವಿ ತಿರುಗಾಟ ನಡೆಸಿದರು. ಸುಮಾರು 1990ರಲ್ಲಿ ತನ್ನ ಕೊನೆಯ ತಿರುಗಾಟದಲ್ಲಿ ಸುಪ್ರಸಿದ್ಧ ಕಲಾವಿದರಾದ ಮಲ್ಪೆ ರಾಮದಾಸ ಸಾಮಗ, ಕೊಳ್ಯೂರು ರಾಮಚಂದ್ರ ರಾವ್, ಪೆರುವಾಯಿ ನಾರಾಯಣ ಶೆಟ್ಟಿ ಮುಂತಾದ ಕಲಾವಿದರ ಸೇರ್ಪಡೆಯಾಯಿತು. "ಗಜ ಸೆಟ್" ಎನಿಸಿದ ಕರ್ನೂರು ಕೊರಗಪ್ಪ ರೈಯವರ ಯಾಜಮಾನ್ಯದ ಕದ್ರಿ ಮೇಳ ತನ್ನ ತಿರುಗಾಟ ನಿಲ್ಲಿಸಿತು. ಸ್ವಲ್ಪ ವರ್ಷಗಳ ನಂತರ, ಸುಪ್ರಸಿದ್ಧ ಕಲಾವಿದರಾದ ಡಿ.ಮನೋಹರ್ ಕುಮಾರ್ ರು ಮಗದೊಮ್ಮೆ ಕದ್ರಿ ಮೇಳ ಹೊರಡಿಸಿದರು. ಭಾಗವತರಾಗಿ ಕಡಬ ರಾಮಚಂದ್ರ ರೈ, ಬೆಳ್ಳಾರೆ ವಿಶ್ವನಾಥ ರೈ, ಬಂಟ್ವಾಳ ಜಯರಾಮ ಆಚಾರ್, ಸರಪಾಡಿ ಅಶೋಕ ಶೆಟ್ಟಿ, ಸೀತಾರಾಮ ಕುಮಾರ್ ಕಟೀಲ, ನಾವುರ ಗಂಗಾಧರ ಶೆಟ್ಟಿ, ಸಿದ್ದಕಟ್ಟೆ ಸದಾಶಿವ ಶೆಟ್ಟಿ, ಡಿ.ಸಂತೋಷ ಕುಮಾರ್, ವೇಣೂರು ವಾಮನ ಕುಮಾರ್, ಅಂಬಾಪ್ರಸಾದ್ ಪಾತಾಳ ವಿನೋದ್ ರೈ ಸೊರಕೆ, ಮುಂತಾದ ಕಲಾವಿದರಿದ್ದರು. ಮನೋಹರ್‌ಕುಮಾರ್ ರವರೂ ಏಳೆಂಟು ವರ್ಷಗಳ ಕಾಲ ತಿರುಗಾಟ ನಡೆಸಿದ ನಂತರ ಕದ್ರಿ ಮೇಳವನ್ನು ನಿಲ್ಲಿಸಿದರು. ಮನೋಹರ್ ಕುಮಾರರ ಯಾಜಮಾನ್ಯದಲ್ಲಿ ಕದ್ರಿ ಮೇಳವು, ಮನೋಹರರೇ ರಚಿಸಿದ ಕದಿರೆದ ಬೊಳ್ಳಿ, ಕದಿರೆದ ಕಾಂಚನ, ಮಣ್ಣ್‌ದ ಮಾಣಿಕ್ಯ, ತಿರುಮಲೆತ ತೀರ್ಥ, "ಗೆಜ್ಜೆದ ಪೂಜೆ" ಪ್ರಸಂಗದ ಎರಡನೇ ಭಾಗವಾದ ಪೂತ ಪೂಜೆ ಮುಂತಾದ ಪ್ರಸಂಗಗಳಲ್ಲದೇ "ಗೆಜ್ಜೆದ ಪೂಜೆ", ಕನ್ನಡ ಚಲನಚಿತ್ರ "ಯಜಮಾನ" ಆಧರಿತ ಪ್ರಸಂಗ (ಹೆಸರು ನೆನಪಿಲ್ಲ, ಬಹುಷಃ ನಾದಿನಿ ನಂದಿನಿ ಇರಬೇಕು.) ಹಾಗೂ ಸಾಲಿಗ್ರಾಮ ಮೇಳದಲ್ಲಿ, ಸುಪ್ರಸಿದ್ಧ ಭಾಗವತರಾದ ಕಾಳಿಂಗ ನಾವುಡರು ರಚಿಸಿ, ನಿರ್ದೇಶಿಸಿ, ಜಯಭೇರಿ ಬಾರಿಸಿದ "ನಾಗಶ್ರೀ" ಪ್ರಸಂಗವನ್ನು ತುಳು ಭಾಷೆಯಲ್ಲಿ ಪ್ರದರ್ಶನ ನೀಡಿ ಯಶಸ್ವಿಯಾಗಿತ್ತು. ನಾಗಶ್ರೀ ಪ್ರಸಂಗದಲ್ಲಿ ಡಿ. ಮನೋಹರ್ ಕುಮಾರರು ಪ್ರಮುಖ ಪಾತ್ರವಾದ ಶಿಥಿಲನ ಪಾತ್ರ ನಿರ್ವಹಿಸಿದರೆ, ಕು.ಶ್ವೇತಾರವರು ದಾರಿಕೆಯ ಪಾತ್ರದಲ್ಲಿ ತುಂಬಾ ಮಿಂಚಿದ್ದರು. ಮನೋಹರ್ ಕುಮಾರ್ ರು ಕದ್ರಿ ಮೇಳದ ತಿರುಗಾಟ ನಿಲ್ಲಿಸಿದ ಬಳಿಕ, ಬೇರೊಬ್ಬರ ಯಾಜಮಾನ್ಯದಲ್ಲಿ, ಬಯಲಾಟ ಮೇಳವಾಗಿ ಸ್ವಲ್ಪ ಕಾಲ ತಿರುಗಾಟ ನಡೆಸಿ, ನೇಪಥ್ಯಕ್ಕೆ ಸರಿಯಿತು. ಮನೋಹರ್ ಕುಮಾರ್‌ರು ಹಲವಾರು ಕಲಾವಿದರನ್ನು ಗುರುತಿಸಿ ರಂಗಕ್ಕೆ ಪರಿಚಯಿಸಿದ್ದು ಈ ಸಮಯದಲ್ಲೇ. ಇತ್ತೀಚೆಗೆ ನಿಧನರಾದ ವಾಮನ್ ಕುಮಾರ್ ವೇಣೂರರ ಪಾಲಿಗೆ ಮನೋಹರರು "ಗಾಡ್ ಫಾದರ್" ಆಗಿ ಬೆಳಕಿಗೆ ತಂದದ್ದು ಇದೇ ಅವಧಿಯಲ್ಲಿ. ಸುಮಾರು 140 ವರ್ಷಗಳ ಇತಿಹಾಸ ಹೊಂದಿರುವ ಕದ್ರಿ ಮೇಳವು ಯಕ್ಷರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು ಸುಳ್ಳಲ್ಲ.



***ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

# ಧೀರ ಕಲೆಯೊಳಗೆ ಕೀರವಾಣಿಯರು – 15



## ಯಕ್ಷಗಾನ ಕಲಾವಿದೆ, ಯಕ್ಷಶಿಕ್ಷಕಿ – ಶ್ರೀಮತಿ ಗೀತಾ ಹೆಗಡೆ ಸಾಲ್ಕಣಿ

**ಸು**ತ್ತಲಿನ ಪರಿಸರ ಅರ್ಥಾತ್ ವಾತಾವರಣ ಎನ್ನವುದು ಯಾವತ್ತಿಗೂ ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಪೂರಕವೇ ಆಗಿರುತ್ತದೆ. ಆ ಪರಿಸರದಲ್ಲಿ ಬಿತ್ತಿ, ಬೆಳೆದದ್ದು ಅಲ್ಲಿದ್ದವರ ವ್ಯಕ್ತಿತ್ವ ಬೆಳವಣಿಗೆಗೆ ಪೋಷಕಾಂಶವಾಗುತ್ತದೆ. ಸಾಂಸ್ಕೃತಿಕವಾಗಿ ಸಮೃದ್ಧವಾಗಿದ್ದ ಊರು, ಮನೆ ಅಲ್ಲಿನ ಮಕ್ಕಳನ್ನು ಸಾಂಸ್ಕೃತಿಕ ವ್ಯಕ್ತಿತ್ವಗಳನ್ನಾಗಿ ರೂಪಿಸುತ್ತದೆ. ಹೀಗೆ ಎಳವೆಯಲ್ಲಿ ಯಕ್ಷಗಾನದ ಪೂರಕ ವಾತಾವರಣದಲ್ಲಿ ಬೆಳೆದು, ಒಬ್ಬಾಕೆ ಸಮರ್ಥ ಕಲಾವಿದೆಯಾಗಿ ತಂಡ ಕಟ್ಟಿ, ಒಳ್ಳೆಯ ಯಕ್ಷಶಿಕ್ಷಕಿಯಾದವರು ಶ್ರೀಮತಿ ಗೀತಾ ಹೆಗಡೆಯವರು.

ಗೀತಾ ಹೆಗಡೆಯವರು ಹುಟ್ಟಿದ್ದು 1973 ಫೆಬ್ರವರಿ 15ರಂದು, ಶಿರಸಿ ಸಮೀಪದ ಸಾಲ್ಕಣಿಯ ಶ್ರೀ ಕೇಶವ ಹೆಗಡೆ ಹಾಗೂ ಶ್ರೀಮತಿ ವಿಲಾಸಿನಿ ದಂಪತಿಯ ಮಗಳಾಗಿ. ಅಜ್ಜ ಮತ್ತು ದೊಡ್ಡಪ್ಪನಿಗಿದ್ದ ಯಕ್ಷಗಾನದ ಮೇಲಿನ ವಿಶೇಷ ಆಸಕ್ತಿ ಇವರನ್ನು ಬಾಲ್ಯದಲ್ಲಿಯೇ ಯಕ್ಷಗಾನದೆಡೆಗೆ ಸೆಳೆಯಿತು. ತನ್ನೂರ ಸಮೀಪ ಎಲ್ಲೇ ಯಕ್ಷಗಾನವಿದ್ದರೂ ಹೋಗಿ ಸಂಪೂರ್ಣ ರಾತ್ರಿ ನೋಡಿ, ಮುಂಜಾವಿಗೆ ಮನೆಗೆ ಹಿಂತಿರುಗಿ ಬರುತ್ತಿದ್ದವರು ಗೀತಾ. ಮನೆಗೆ ಬಂದ ಬಳಿಕವೂ ತನ್ನ ಒಡನಾಡಿಗಳಾಗಿದ್ದ ಕೆಲವು ಮಕ್ಕಳ ಜೊತೆಗೂಡಿ ರಾತ್ರೆಯ ಆಟದ್ದೇ ಸುದ್ದಿ. ಎಳೆಯ ಮನಸ್ಸುಗಳಿಗೆ ತೋಚಿದ ಮನೆಯಲ್ಲೇ ಇವರದ್ದೊಂದು ಆಟ. ಹೀಗೆ ಯಕ್ಷಗಾನವನ್ನು ಪ್ರೀತಿಸಿ ಇನ್ನಷ್ಟು ಆಪ್ತತೆಯಿಂದ ಅದನ್ನು ಕಂಡವರು ಗೀತಾ ಹೆಗಡೆಯವರು. ಶಿರಸಿಯ ಎಮ್.ಇ.ಎಸ್ ಕಲಾ ಮತ್ತು ವಿಜ್ಞಾನ ಕಾಲೇಜಿನಿಂದ ಬಿ.ಎ. ಪದವಿಯನ್ನೂ, ಮಾನಸ ಗಂಗೋತ್ರಿ ಮೈಸೂರಿನಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರಿವರು. ಇವರು ವಿದ್ಯಾರ್ಥಿನಿಯಾಗಿರುವಾಗಲೇ ಬಹಳಷ್ಟು ಏಕಪಾತ್ರಾಭಿನಯಗಳಲ್ಲಿ ಭಾಗವಹಿಸಿ, ಪ್ರಥಮ ಬಹುಮಾನವನ್ನು ಪಡೆದುಕೊಳ್ಳುತ್ತಿದ್ದವರು. ಮನೆಯಲ್ಲಿದ್ದ ಹಿರಿಯರು ಇವರಲ್ಲಿದ್ದ ಯಕ್ಷಗಾನದಲ್ಲಿದ್ದ ಆಸಕ್ತಿಯನ್ನು ಗಮನಿಸಿ, ಯಕ್ಷಗಾನದ ಮೇರು ಪ್ರತಿಭೆ ಹೊಸ್ತೋಟ ಮಂಜುನಾಥ ಭಾಗವತರಿಂದ ಅಲ್ಲಿದ್ದ ಒಂದಿಷ್ಟು ಮಕ್ಕಳನ್ನೂ ಸೇರಿಸಿ ತರಬೇತಿ ಕೊಡಿಸಿದರು. ತಾಳ, ಲಯ, ಕುಣಿತಗಳ ಶಿಸ್ತುಬದ್ಧ ತರಬೇತಿಸಹಾಯಕ ಗುರುಗಳಾದ ಪರಮೇಶ್ವರ ಹೆಗಡೆ ಐನಬೈಲ್ ಹಾಗೂ ನಾಗರಾಜ ಜೋಶಿ ಸೋಂದಾ ಇವರಿಂದಲೂ ಆಯಿತು. ಹೆಮ್ಮಕ್ಕಳು ಯಕ್ಷಗಾನ ಕಲಿಯಬಾರದೆಂಬ ನಿರ್ಬಂಧವೇನೂ ಇವರ ಮನೆತನದ ಹಿರಿಯರು ಹೇರಲಿಲ್ಲ ಎಂಬುದು ಅಂದಿನ ಕಾಲಕ್ಕದು ವಿಶೇಷ ಸಂಗತಿಯಾಗಿತ್ತು. ಹೀಗೆ ಸಾಲ್ಕಣಿಯಲ್ಲಿ ಪ್ರಾರಂಭವಾದದ್ದು ಶ್ರೀ ಲಕ್ಷ್ಮೀ ನರಸಿಂಹ ಮಕ್ಕಳ ಯಕ್ಷಗಾನ ಮಂಡಳಿ. ತನ್ನ ಹದಿಮೂರನೇ ವಯಸ್ಸಿಗೆ ಗೀತಾ ಗೆಗಡೆಯವರು ಏಕಲವ್ಯನಾಗಿ ರಂಗವೇರಿದರು. ವೀರವರ್ಮ, ಕರ್ಣ, ಕಂಸ, ಮಾಗಧ, ಸುಧನ್ವ, ಭೀಷ್ಮ, ಅರ್ಜುನ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಾ ಸೈ ಎನಿಸಿಕೊಂಡರು. ಶ್ರೀ ಜಯರಾಮ ಹೆಗಡೆಯವರನ್ನು ಮದುವೆಯಾಧ ಬಳಿಕ, ಮಗ 'ಮನು'ವಿನ ಜನನವಾದ ಮೇಲೆ 8–10 ವರ್ಷಗಳ ಕಾಲ ಪ್ರೇಕ್ಷಕಿಯಾಗಿಯೇ ಉಳಿಯಬೇಕಾಗಿ ಬಂದರೂ, ಮತ್ತೆ ಪುನಃ ಪತಿ, ಅತ್ತೆ–ಮಾವನ ಪ್ರೋತ್ಸಾಹ ಸಹಕಾರದಿಂದ ಗೆಜ್ಜೆ ಕಟ್ಟಿದರು. ಮತ್ತೆ ಇಂದಿನವರೆಗೆ ಹಿಂತಿರುಗಿ ನೋಡಿದ್ದಿಲ್ಲ.



ದಕ್ಷ, ವಿಷ್ಣು, ಅಭಿಮನ್ಯು, ಕರ್ಣ, ಅರ್ಜುನ, ಸುಧನ್ವ, ಭೀಷ್ಮ, ಕಂಸ, ಮಾಗಧ. ವೀರವರ್ಮ, ಬಲರಾಮ, ರಕ್ತಬೀಜ, ಸಾಲ್ವ, ಭೀಮ ಮುಂತಾದ ಎಲ್ಲಾ ರೀತಿಯ ಪಾತ್ರಗಳನ್ನು ನಿರ್ವಹಿಸಿದರೂ ಇವರು ಇಷ್ಟ ಪಡುವ ವೇಷ ಕೇದಗೆ ಮುಂದಲೆಯ ಕೃಷ್ಣ. ಆರಂಭಿಕ ಗುರುಗಳಿದ್ದರೂ ಬೆಂಗಳೂರಿಗೆ ಬಂದಮೇಲೆ ಅದೂ ಹತ್ತು ವರುಶಗಳ ನಂತರ ಇವರ ಯಕ್ಷಗಾನ ಕಲಿಕೆ ಎಳವೆಯಲ್ಲಿ ಇದ್ದ ಹಾಗೆ ಇರಲಿಲ್ಲ. ಇಲ್ಲಿ ಸ್ವಂತಿಕೆ ಬೇಕಿತ್ತು. ನಿರಂತರ ಹೊಸ ಕಲಿಕೆಯ ಅಗತ್ಯವಿತ್ತು. ಹಾಗಾಗಿ ಅನೇಕ ಅನುಭವಿಗಳ, ಹಿರಿಯ ಕಲಾವಿದರ ವೇಷಗಳನ್ನು ನೋಡುತ್ತಾ ಗೀತಾ ಹೆಗಡೆಯವರು ಹೊಸ ಹೊಸ ಯಕ್ಷಗಾನದ ವಿಚಾರಗಳನ್ನು ಬೆಂಗಳೂರಿನಲ್ಲೂ ಜನಮನ್ನಣೆಗಳಿಸತೊಡಗಿದರು. ಯಕ್ಷಗಾನ ಕಲಿತ ಆರಂಭದಿಂದ ಇಂದಿನವರೆಗೆ ಇವರಿಗೆ ಅವಕಾಶವನ್ನಿತ್ತು ಪ್ರೋತ್ಸಾಹಿಸಿದ, ಡಾ.ವಿಜಯ ನಳಿನಿ ರಮೇಶ್ ಅವರ ಸಮಯ ಸಮೂಹ, ಬೆಂಗಳೂರಿನ ವಿ.ಆರ್.ಹೆಗಡೆ




ಹಾಘೂ ಸುರೇಶ್ ಹೆಗಡೆ ಕಡತೋಕಾ ವರ ಸಿರಿಕಲಾ ಮೇಳ, ಮಯೂರಿ ಉಪಾಧ್ಯಾಯ ಅವರ ಯಕ್ಷಸಿರಿ ಬೆಂಗಳೂರು ತಂಡವನ್ನು ಸದಾ ಸ್ಮರಿಸುವ ಇವರ ಬದ್ಧತೆ ಮೆಚ್ಚತಕ್ಕದ್ದಾಗಿದೆ. ಯಕ್ಷಗಾನ ಕಲಾವಿದೆಯಾಗಿ ಕರ್ನಾಟಕ ಮಾತ್ರವಲ್ಲದೇ ದೆಹಲಿ, ಮುಂಬಯಿ, ಹೈದರಾಬಾದ್ ಮುಂತಾದ ಕಡೆಗಳಲ್ಲೂ ಪ್ರದರ್ಶನ ನೀಡಿದ್ದಲ್ಲದೇ, ಯಕ್ಷಗಾನಾಸಕ್ತಿಯಿಂದ ಬಂದವರಿಗೆ ಯಕ್ಷಗಾನವನ್ನೂ ಕಲಿಸಿಕೊಡುತ್ತಿದ್ದಾರೆ. ಉತ್ತರಕನ್ನಡ ಪತ್ರಿಕೆಯೊಂದರಲ್ಲಿ ವರದಿಗಾರಳಾಗಿ ಕೆಲಸ ಮಾಡಿದ ಅನುಭವವಿರುವ ಇವರು ಚೆನ್ನಾಗಿ ಬರೆಯಬಲ್ಲರು ಕೂಡ.



ಶ್ರೀಮತಿ ಗೀತಾ ಹೆಗಡೆ ಸಾಲ್ಕಣಿಯವರ ಯಕ್ಷಪ್ರತಿಭೆಯನ್ನು ಗುರುತಿಸಿ, ಬೆಂಗಳೂರಿನ ಗಾನಸೌರಭ ಯಕ್ಷಗಾನ ಶಾಲೆಯವರು 'ಯಕ್ಷಾಭಿವಂದನಂ', ಅಕ್ಕನಮನೆ ಪ್ರತಿಷ್ಠಾನ ಬೆಂಗಳೂರು ಇವರು 'ದೇಸೀ ದಿಬ್ಬಣ ಕಲಾಸಿರಿ ಪ್ರಶಸ್ತಿ', ಹೈದರಾಬಾದಿನ ಕರಾವಳಿ ಮೈತ್ರಿ ಸಂಘದವರು ' ಯಕ್ಷನಾಟ್ಯ ಸರಸ್ವತಿ' ಹಾಗೂ ಕಾಣಿಯೂರು ಮಠ ಉಡುಪಿ ಯವರಿಂದ ' ಶ್ರೀಕೃಷ್ಣ ನೃಸಿಂಹಾನುಗ್ರಹ ಪ್ರಶಸ್ತಿ' ಗಳನ್ನು ನೀಡಿ ಗೌರವಿಸಿದ್ದಲ್ಲದೇ ಅನೇಕ ಸಂಘ–ಸಂಸ್ಥೆಗಳು ಇವರನ್ನು ಗೌರವಿಸಿ, ಸಂಮಾನಿಸಿವೆ. ಮನೆಯವರೆಲ್ಲರ ಪ್ರೋತ್ಸಾಹದಿಂದ ಇನ್ನು ಮುಂದೆಯೂ ಕೂಡ ಗೀತಾ ಹೆಗಡೆ ಸಾಲ್ಕಣಿಯವರು ಯಕ್ಷಗಾನ ಕಲಾಸೇವೆ ಮಾಡುವಂತಾಗಲಿ ಎಂಬುದೇ ನಮ್ಮ ಆಶಯ.


***ಲೇಖಕರು– ಸಾಯಿಸುಮಾ ಎಂ. ನಾವಡ, ಕಾರಿಂಜ***

# ಕಂದಾವರ ರಘುರಾಮ ಶೆಟ್ಟರ ಯಕ್ಷಗಾನ ಪ್ರಸಂಗ ಕೃತಿಗಳು




**ಕಂ**ದಾವರ ರಘುರಾಮ ಶೆಟ್ಟರು ಬಹುಮುಖ ಪ್ರತಿಭೆಯ ಶ್ರೇಷ್ಠ ಯಕ್ಷಗಾನ ಪ್ರಸಂಗಕರ್ತ. 1936ರಲ್ಲಿ ಕುಂದಾಪುರ ತಾಲೂಕಿನ ಕಂದಾವರದಲ್ಲಿ ಜನಿಸಿದ ಇವರ ತಂದೆ ಸದಿಯಣ್ಣ ಶೆಟ್ಟಿ ತಾಯಿ ಪುಟ್ಟಮ್ಮ. ಬಳ್ಕೂರು, ಹಟ್ಟಿಯಂಗಡಿ, ಬಸ್ರೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಕುಂದಾಪುರದಲ್ಲಿ ಹೈಸ್ಕೂಲು ಶಿಕ್ಷಣ ಮಂಗಳೂರಿನಲ್ಲಿ ಶಿಕ್ಷಕರ ತರಬೇತಿ ಪಡೆದ ರಘುರಾಮ ಶೆಟ್ಟರು ಕುಂದಾಪುರ ತಾಲೂಕಿನ ಕಂಡ್ಲೂರು ಶಾಲೆಯಲ್ಲಿ ಅಧ್ಯಾಪಕರಾಗಿ 35 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಯಕ್ಷಗಾನ ರಂಗದಲ್ಲಿ ತಾಳಮದ್ದಳೆ ಅರ್ಥಧಾರಿಯಾಗಿ, ಭಾಗವತರಾಗಿ, ವೇಷಧಾರಿಯಾಗಿ ಸೇವೆಸಲ್ಲಿಸಿದ ಇವರು ಪ್ರಸಂಗಕರ್ತರಾಗಿ 33 ಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿ ಪ್ರಖ್ಯಾತರಾಗಿದ್ದಾರೆ. ಯಕ್ಷಗಾನದ ಜೊತೆಗೆ ಹಲವು ನಾಟಕಗಳನ್ನು ಬರೆದು ನಟನಾಗಿ ಅಭಿನಯಿಸಿ, ಕಥೆ ಕವನಗಳನ್ನು ರಚಿಸಿ ಸಾಹಿತಿಯಾಗಿ ತಾಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಬಹುಮುಖ ಪ್ರತಿಭೆಯನ್ನು ಮೆರೆದಿದ್ದಾರೆ. ಕವಿ ಮುದ್ದಣ ಪ್ರಶಸ್ತಿ, ಸೀತಾನದಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ, ಸನ್ಮಾನಗಳನ್ನು ಪಡೆದ ರಘುರಾಮ ಶೆಟ್ಟರು ನಮ್ಮ ನಡುವೆ ಇರುವ ಓರ್ವ ಛಂದೋಬದ್ಧ ಯಕ್ಷಗಾನ ಕವಿಯಾಗಿ ಗುರುತಿಸಲ್ಪಡುತ್ತಾರೆ.

ಕಂದಾವರ ರಘುರಾಮ ಶೆಟ್ಟರ ಶ್ರೇಷ್ಠ ಹತ್ತು ಪ್ರಸಂಗ ಕೃತಿಗಳು ಯಕ್ಷಗಾನ ದಶಮಿ ಎನ್ನುವ ಸಂಪುಟದಲ್ಲಿ ಪ್ರಕಟವಾಗಿವೆ. ಇದನ್ನು ಮಾದಯ್ಯ ಶೆಟ್ರಮನೆ ಧಾರ್ಮಿಕ ಪ್ರತಿಷ್ಠಾನ ಉಪ್ಪುಂದ ಇವರು 2001ರಲ್ಲಿ ಪ್ರಕಟಿಸಿದ್ದಾರೆ. ಈ ಯಕ್ಷ ಸಂಪುಟದಲ್ಲಿ ಸತಿ ಸೀಮಂತಿನಿ, ನಾಗಾನಂದನೆ, ಸೀತಾಪಾರಮ್ಯ, ವಧೂ ಮಾಧವಿ, ವಸುವರಾಂಗಿ, ಶ್ರೀದೇವಿ ಬನಶಂಕರಿ, ಚೆಲುವೆ ಚಿತ್ರಾವತಿ, ಶೂದ್ರ ತಪಸ್ವಿನಿ, ರತಿರೇಖಾ ಮತ್ತು ಮಂತ್ರ ಮಾಣಿಕ್ಯ ಪ್ರಸಂಗ ಕೃತಿಗಳು ಸೇರಿವೆ. ಹೆಚ್ಚಿನ ಎಲ್ಲ ಪ್ರಸಂಗಗಳು ಎಂಬತ್ತರ ದಶಕದಲ್ಲಿ ಸಾಲಿಗ್ರಾಮ, ಪೆರ್ಡೂರು ಮೊದಲಾದ ಬಡಗುತಿಟ್ಟಿನ ಪ್ರಸಿದ್ಧ ಮೇಳಗಳಿಂದ ನೂರಾರು ಪ್ರದರ್ಶನಗಳನ್ನು ಕಂಡು ಜನಪ್ರಿಯವಾಗಿದ್ದವು. ಕಾಳಿಂಗ ನಾವಡರಂತಹ ಮೇರು ಪ್ರತಿಭೆಯ ಭಾಗವತರು ಇವರ ಪ್ರಸಂಗ ಕೃತಿಗಳನ್ನು ಮೆಚ್ಚಿಕೊಂಡು ನೂರಾರು ಪ್ರದರ್ಶನ ನೀಡಿದ್ದರು ಎನ್ನುವುದು ಇವರ ಕವಿ ಸಾಮರ್ಥ್ಯವನ್ನು ಸೂಚಿಸುತ್ತದೆ. ಕಂದಾವರ ರಘುರಾಮ ಶೆಟ್ಟಿಯವರ ಗಂಗಾಶಾಪ, ನಳ ದಮಯಂತಿ ಪ್ರಸಂಗಗಳು ಪ್ರೊ. ಎಂಎ ಹೆಗಡೆಯವರ ಪ್ರಧಾನ ಸಂಪಾದಕತ್ವದಲ್ಲಿ 2019ರಲ್ಲಿ ಯಕ್ಷಗಾನ ಪ್ರಸಂಗ ಪಂಚಮಿ ಸಂಪುಟದಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿಯವರಿಂದ ಪ್ರಕಟವಾಗಿದೆ. ಇವರ ಶ್ರೀ ಬಾರಾಳಿ ಕ್ಷೇತ್ರ ಮಹಾತ್ಮೆ ಪ್ರಸಂಗ ಕೃತಿ ಕೂಡ ಮುದ್ರಣ ಕಂಡಿದೆ. ಶ್ರೀ ದೇವಿ ಬನಶಂಕರಿ ಕೃತಿ 1985ರಲ್ಲಿ ಕಂದಾವರರ ಪ್ರಥಮ ಮುದ್ರಿತ ಪ್ರಸಂಗ ಕೃತಿಯಾಗಿ ಕವಿಗಳಿಂದಲೇ ಪ್ರಕಟವಾಗಿದೆ.



ಇವರಿಂದ ರಚಿತವಾದ ಇತರ ಯಕ್ಷಗಾನ ಪ್ರಸಂಗ ಕೃತಿಗಳೆಂದರೆ ರಾಧೇಯ, ಯೋಗ ಗುರು ಪತಂಜಲಿ, ಇಚ್ಛಾಮರಣಿ ಭೀಷ್ಮ, ಪುರಿ ಕ್ಷೇತ್ರ ಮಹಾತ್ಮೆ, ಹರಿಹಳ್ಳಿ ಕ್ಷೇತ್ರ ಮಹಾತ್ಮೆ, ಆದಿಚುಂಚನಗಿರಿ ಮಹಾತ್ಮೆ, ರಕ್ತೇಶ್ವರಿ ಕ್ಷೇತ್ರ ಮಹಾತ್ಮೆ, ಶಿರಡಿ ಕ್ಷೇತ್ರ ಮಹಾತ್ಮೆ, ಅಮೃತೇಶ್ವರಿ ಕ್ಷೇತ್ರ ಮಹಾತ್ಮೆ, ಗೋಳಿಗರಡಿ ಕ್ಷೇತ್ರ ಮಹಾತ್ಮೆ, ಸಾಧ್ವಿ ಸುನಂದೆ, ಚಾರು ಚಂದ್ರಿಕೆ, ತ್ಯಾಗ ತಪಸ್ವಿ, ಸಮಾರಾ ಸಂಧಾನ, ವಿಜಯ ಕೇಸರಿ, ಪುಷ್ಪಾ0ಜಲಿ, ಕಲ್ಯಾಣಮಸ್ತು, ಗಿರಿಕನ್ಯೆ, ಮಾತೃದೇವೋಭವ ಮಹಿಮಾ ಮಾಧವ ಇತ್ಯಾದಿ. ಕಂದಾವರ ರಘುರಾಮ ಶೆಟ್ಟಿಯವರ ಜೀವನ ಸಾಧನೆ ಚಿಂತನೆ ಕುರಿತ ಅಭಿನಂದನ ಕೃತಿ ಕಂದಾವರೆ 2015 ರಲ್ಲಿ ಶ್ರೀ ತಾರಾನಾಥ ವರ್ಕಾಡಿಯವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ರಘುರಾಮ ಶೆಟ್ಟರ ಪ್ರಸಂಗ ಕೃತಿಗಳು ಸರಳವಾಗಿದ್ದು ಸಾಮನ್ಯ ಜ್ಞಾನ ಹೊಂದಿದ ಕಲಾವಿದ, ಪ್ರೇಕ್ಷಕ ಸುಲಭವಾಗಿ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಇರುವುದು ಜನಪ್ರಿಯಗೊಳ್ಳಲು ಕಾರಣವಾಗಿದೆ.

***ಲೇಖಕರು– ಉಮೇಶ ಶಿರೂರು, ಬೆಂಗಳೂರು 9448353910***

***ವಿಶೇಷ ಕಾರ್ಯಕ್ರಮ–*** ಕಲೆ ಮತ್ತು ಕಲಾವಿದರಿಗೆ ಸ್ಪಂದನೆಯ ಧ್ಯೇಯೋದ್ದೇಶಗಳಿಂದ ಮಂದಾರ್ತಿ ಗ್ರಾಮದಲ್ಲಿ ಟ್ರಸ್ಟ್ ವೊಂದು ಪ್ರಾರಂಭವಾಗುತ್ತಿದೆ. ಯಕ್ಷಗಾನ ಕಲಾವಿದ ಪ್ರಕಾಶ್ ಕಿರಾಡಿಯವರ ಸಾರಥ್ಯದಲ್ಲಿ ಯಕ್ಷ ನಕ್ಷತ್ರ ಟ್ರಸ್ಟ್ (ರಿ.) ಕಿರಾಡಿ ಇದರ ಲೋಕಾರ್ಪಣೆ ಸೆಪ್ಟೆಂಬರ್ 3 ರಂದು ನಡೆಯಲಿದೆ. ಪ್ರಾರಂಭೋತ್ಸವದ ದಿನದಂದು ಬೆಳಗ್ಗೆಯಿಂದ ಸಂಜೆಯವರೆಗೆ ವಿವಿಧ ಯಕ್ಷಗಾನ ಕಾರ್ಯಕ್ರಮಗಳು, ಅರ್ಹ ಪ್ರತಿಭಾವಂತ, ಎಲೆಮರೆಯ ಕಲಾವಿದರ ಕಾಲ ಸೇವೆಯನ್ನು ಗುರುತಿಸಿ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹಾಸ್ಯ ಕಲಾವಿದರಿಂದ ರಂಗಲೀಲೆ,, ಪ್ರಸಿದ್ಧ ಭಾಗವತರಿಂದ ಸ್ವರ ಸಪ್ತಮಿ, ನಾಡು ತಿಟ್ಟಿನ ಕಲಾವಿದರಿಂದ ದ್ರೌಪದಿ ಪ್ರತಾಪ, ಪ್ರಸಿದ್ಧ ಕಲಾವಿದರಿಂದ ಭೂ ವೈಕುಂಠ ಯಕ್ಷಗಾನ ಪ್ರದರ್ಶನ ನಡೆಯಲಿದೆ. ಯಕ್ಷಾಭಿಮಾನಿಗಳನ್ನು ಆಡಳಿತ ಮಂಡಳಿಯ ಪದಾಧಿಕಾರಿಗಳು ಪ್ರೀತಿಪೂರ್ವಕವಾಗಿ ಆಮಂತ್ರಿಸಿದ್ದಾರೆ.